# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಹಂಪಿ ಟೈಮ್ಸ್
With Your support
HAMPI TIMES E-Paper reached
2 Lakh + Views
4 Lakh + Events Count
40,000+ Readers



Send Your Feedback to Email : hampitimes@gmail.com



ಸಂಪುಟ:01 Volume:01 • ಸಂಚಿಕೆ:235 Issue:235 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 11.02.2024 11.02.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


ಮೈಕ್ರೋ ನ್ಯೂಸ್

## ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾಗಿ ಕಿಚಿಡಿ ಕೊಟ್ರೇಶ್ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾಗಿ ಕಿಚಿಡಿ ಕೊಟ್ರೇಶ್ ನೇಮಕಗೊಂಡಿದ್ದಾರೆ. ಜಿಲ್ಲೆಯಲ್ಲಿ ಪಕ್ಷದ ಸಂಘಟನೆ ಮತ್ತು ಪಕ್ಷ ವಹಿಸಿರುವ ಜವಾಬ್ದಾರಿ



ಅಚ್ಚುಕಟ್ಟಾಗಿ ನಿರ್ವಹಿಸಿ, ಪಕ್ಷದ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ತಿಳಿಸಿದ್ದಾರೆ. ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ ಹಂಪಿ ಟೈಮ್ಸ್‌ನೊಂದಿಗೆ ಮಾತನಾಡಿ, ಪಕ್ಷದ ಬಲವರ್ಧನೆ ಮತ್ತು ಸಂಘಟನೆಗೆ ನನ್ನನ್ನು ಗುರುತಿಸಿ ಜವಾಬ್ದಾರಿ ನೀಡಿರುವ ಜಿಲ್ಲಾಧ್ಯಕ್ಷರಿಗೆ ಮತ್ತು ನನಗೆ ಈ ಜವಾಬ್ದಾರಿ ಹಂಚಿಕೆ ಮಾಡಲು ನೇರ ಹಾಗೂ ಪರೋಕ್ಷವಾಗಿ ಸಹಕರಿಸಿದವರ ಆಶಯದಂತೆ ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತೇನೆ. ಮೋದಿಜಿ ಯವರನ್ನು ಮತ್ತೊಮ್ಮೆ ಪ್ರಧಾನಿಯಾಗಿಸಲು ಎಲ್ಲರ ಸಹಕಾರದೊಂದಿಗೆ ಶ್ರಮಿಸುತ್ತೇನೆ ಎಂದು ತಿಳಿಸಿದರು.

## ನಗರಸಭೆ ಉಪಾಧ್ಯಕ್ಷ ಎನ್.ರೂಪೇಶಕುಮಾರ್ ರಾಜಿನಾಮೆ ಸಲ್ಲಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆ ಉಪಾಧ್ಯಕ್ಷ ಎನ್.ರೂಪೇಶ ಕುಮಾರ್ ಅವರು ಗುರುವಾರ ನಗರಸಭೆಯ ತನ್ನ ಉಪಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದ್ದಾರೆ.

ಅನೇಕ ಕೆಲಸಗಳಿರುವುದರಿಂದ ಉಪಾಧ್ಯಕ್ಷ ಸ್ಥಾನದ ಕೆಲಸ ನಿರ್ವಹಿಸಲು ಆಗುತ್ತಿಲ್ಲ. ಯಾವ ಒತ್ತಡಗಳಿಗೆ ಮಣಿಯದೆ ನನ್ನ, ಸ್ವಇಚ್ಛೆಯಿಂದ ಹೊಸಪೇಟೆ ನಗರಸಭೆ ಉಪಾಧ್ಯಕ್ಷರ ಸ್ಥಾನಕ್ಕೆ ರಾಜಿನಾಮೆ ನೀಡುತ್ತಿದ್ದೇನೆ. ರಾಜಿನಾಮೆಯನ್ನು ಅಂಗೀಕರಿಸಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಸಲ್ಲಿಸಿರುವ ರಾಜಿನಾಮೆ ಪತ್ರದಲ್ಲಿ ವಿನಂತಿಸಿದ್ದಾರೆ.

ಹಂಪಿ ಟೈಮ್ಸ್ ಪತ್ರಿಕೆಯೊಂದಿಗೆ ಮಾತನಾಡಿದ ಉಪಾಧ್ಯಕ್ಷ ಎನ್.ರೂಪೇಶ ಕುಮಾರ ಗುರುವಾರ ರಾಜಿಮಾಮೆ ಸಲ್ಲಿಸಿರುವುದನ್ನು ಖಚಿತಪಡಿಸಿದ್ದಾರೆ.

**ಗುಸುಗುಸು:** ಈ ಹಿಂದೆಯೂ ನಗರಸಭೆ ಉಪಾಧ್ಯಕ್ಷ ಸ್ಥಾನಕ್ಕೆ ಎಲ್.ಎಸ್.ಆನಂದ ರಾಜಿನಾಮೆ ನೀಡಿದ ಬಳಿಕ ಅಧ್ಯಕ್ಷರ ರಾಜಿನಾಮೆ ನೀಡಲಿದ್ದಾರೆ ಎಂಬ ಮಾತುಗಳು ದಟ್ಟವಾಗಿ ಕೇಳಿಬಂದಿದ್ದವು. ಆದರೆ ಆರಂಭದಲ್ಲಿ ರಾಜಿನಾಮೆ ನೀಡಲು ಹಿಂಜರಿದಿದ್ದ ಅಂದಿನ ಅಧ್ಯಕ್ಷರು ಕೊನೆಗೆ ರಾಜಿನಾಮೆ ನೀಡಿದರು. ಈಗ ಮತ್ತದೇ ರಾಜಿನಾಮೆ ಪ್ರಹಸನ ಆರಂಭವಾಗಿದೆ. ನಗರಸಭೆಯ ಆಡಳಿತದ ಚುಕ್ಕಾಣಿ ಬಿಜೆಪಿ ಹಾಗೂ ಬಿಜೆಪಿ ಬೆಂಬಲಿತ ಅರ್ಹ ಸದಸ್ಯರಿಗೆ ಸಿಗಬೇಕೆಂಬ ಮೌಖಿಕ ಒಪ್ಪಂದಗಳು ನಡೆದಿವೆ ಎಂಬ ವದಂತಿಗಳಿದ್ದು, ಅಧಿಕಾರವಧಿ ಪೂರ್ಣಗೊಳ್ಳುವ ಮುನ್ನವೆ ನಡೆಯುತ್ತಿರುವ ರಾಜಿನಾಮೆ ಪ್ರಹಸನಗಳು ವದಂತಿಗಳಿಗೆ ಪುಷ್ಟೀನೀಡುತ್ತಿವೆ. ಇದೀಗ ಅಧ್ಯಕ್ಷೆ ಲತಾ ಅವರು ರಾಜಿನಾಮೆ ನೀಡುವರೋ, ಮುಂದುವರೆಯುವರೋ ಕಾದುನೋಡಬೇಕು.

# ತಂದೆ ತಾಯಿಯೇ ನಮಗೆ ಹೀರೋಗಳು

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ಭ್ರಮೆಗಳಿಗೆ ಸಿಲುಕದೆ ಹೆತ್ತವರ ಕನಸು ಸಾಕಾರಗೊಳಿಸಿ | ಅಹಂಕಾರ ಹತ್ತಿಕ್ಕಿದರೆ ಆನಂದವೇ ಹೆಚ್ಚು

**ಹಂಪಿ ಟೈಮ್ಸ್ ಹೊಸಪೇಟೆ**

ಪಿಯು, ಡಿಗ್ರಿ ಓದುವ ಮಕ್ಕಳ ವಯಸ್ಸು ಭ್ರಮೆಗಳಿಂದ ತುಂಬಿರುವುದು ಸಹಜ. ನಾಲ್ಕೈದು ವರ್ಷ ಭ್ರಮೆಗಳಿಂದ ದೂರಾಗಿ ಕಠಿಣ ಪರಿಶ್ರಮಪಟ್ಟರೆ ಜೀವನದುದ್ದಕ್ಕೂ ರಾಜನಂತೆ ಬದುಕಬಹುದು. ಭ್ರಮೆಗಳಿಗೆ ಸಿಲುಕಿ ಮೌಲ್ಯಯುತ ಸಮಯವನ್ನು ವ್ಯರ್ಥಮಾಡಿಕೊಳ್ಳಬೇಡಿ. ತಂದೆ ತಾಯಿ ಕನಸು ನನಸಾಗಿಸುವ ಮಕ್ಕಳಾದರೆ ಜೀವನವೇ ಸಾರ್ಥಕ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ನಗರದ ವಿಜಯನಗರ ಮಹಾವಿದ್ಯಾಲಯವು ಸುವರ್ಣ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಯಶಸ್ಸಿನ ಹಾದಿ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಭ್ರಮೆಗಳು ದುರ್ಗಮ ಸ್ಥಿತಿಗೆ ತಳ್ಳುತ್ತವೆ. ಒಬ್ಬರು ಮತ್ತೊಬ್ಬರ ಬಗ್ಗೆ ಯೋಚನೆ ಮಾಡುವುದಕ್ಕಿಂತ ತನ್ನ ಓದಿನಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಮತ್ತೊಬ್ಬರೊಂದಿಗೆ ಹೋಲಿಕೆ ಮಾಡಿ ಕೊಳ್ಳದೇ ತನ್ನದೇ ಅದ ಶೈಲಿಯಲ್ಲಿ ವಿಷಯಗಳನ್ನು ಅರ್ಥೈಸಿಕೊಂಡು ಪರೀಕ್ಷೆಗಳಿಗೆ ಸನ್ನದ್ಧರಾಗಬೇಕು. ಎಷ್ಟು ಗಂಟೆಗಳ ಕಾಲ ಓದುತ್ತೇನೆ ಎಂಬುದು ಮುಖ್ಯವಲ್ಲ. ವಿಷಯ ಅರ್ಥೈಸಿಕೊಳ್ಳುವವರೆಗೂ ಓದಲೇಬೇಕು. ಸಾಧನೆಯ ಗುರಿ ತಲುಪುವ ವರೆಗೂ ಕಿವುಡರಾಗಬೇಕು, ಸಾಧನೆಯನಂತರ ಮೂಕರಾಗಬೇಕು. ಸಮಾಜದಲ್ಲಿ ಮಾಡುವ ಕೆಲಸಗಳಿಗೆ ಪ್ರಶಂಸೆಗಳು, ಟೀಕೆಗಳು ಸಹಜ. ಮಾಡಿದ ಕಾರ್ಯಗಳಿಗೆ ಬರುವ ಪ್ರಶಂಸೆಗಳಿಗೆ ಅತಿಯಾಗಿ ಹಿಗ್ಗಬಾರದು. ಟೀಕೆಗಳಿಗೂ ಕುಗ್ಗಬಾರದು. ಮುಂದೆ ಮಾಡಬೇಕಾದ ಕಾರ್ಯಗಳತ್ತ ಗಮನಹರಿಸಬೇಕು. ಕಲಿಯಬೇಕಾದ ಪಠ್ಯದತ್ತ ಚಿತ್ತಹರಿಸಬೇಕಷ್ಟೇ. ಆತ್ಮವಿಶ್ವಾಸ ಎಂದಿಗೂ ಕುಗ್ಗಬಾರದು. ಮಾಡುವ ಕಾರ್ಯದ ಉದ್ದೇಶ ಸರಿಯಾಗಿದ್ದರೆ ಸಾಕು ನಿಸರ್ಗವೇ ನಮ್ಮನ್ನು ಕಾಪಾಡುತ್ತದೆ. ಓದುವ ಸಮಯದಲ್ಲಿ ಮೊಬೈಲ್ ತ್ಯಾಗ ಅನಿವಾರ್ಯ. ಅಗತ್ಯಕ್ಕೆ ತಕ್ಕಷ್ಟೆ ಮೊಬೈಲ್‌ಗಳನ್ನು ಬಳಸಬೇಕು. ವಿನಾಃಕಾರಣ ಹರಟೆ, ಅನಾವಶ್ಯಕಗಳ ವಿಚಾರಗಳಿಗಾಗಿ ಸಮಯ ಹಾಳುಮಾಡಿಕೊಳ್ಳಬಾರದು. ತಂದೆ, ತಾಯಿ ಮತ್ತು ಗುರುಗಳನ್ನೇ ನಮ್ಮ ಹೀರೋಗಳನ್ನಾಗಿಸಿಕೊಳ್ಳಬೇಕು. ಉತ್ತಮ ಮಕ್ಕಳಾಗಿ ಗುರುಗಳಿಗೆ ಒಳ್ಳೆಯ ಶಿಷ್ಯರಾಗಿ, ಸಂಸ್ಕೃತಿ ಸಂಸ್ಕಾರಗಳಡಿ ಬೆಳೆಯಬೇಕು. ಭ್ರಮೆಗಳನ್ನು ದೂರಾಗಿಸಿ ಸತ್ಯವನ್ನು ಅಪ್ಪಿಕೊಂಡರೆ ಬದುಕು ಸುಂದರವಾಗಲಿದೆ. ಯಶಸ್ಸಿನ ಬೆನ್ನು ಹತ್ತುವುದಕ್ಕಿಂತ ಯಶಸ್ಸು ನಮ್ಮ ಬೆನ್ನತ್ತುವಂತೆ ಪರಿಶ್ರಮಪಡಬೇಕು. ಮಾಡಿದ ಕೆಲಸಗಳು ಸಾಧನೆ ಎನ್ನುವುದಕ್ಕಿಂತ ಕರ್ತವ್ಯವೆಂದು ಭಾವಿಸಿದಾಗ ಮನುಷ್ಯನಿಗೆ ಅಹಂಕಾರಕ್ಕಿಂತ ಆನಂದವೇ ಹೆಚ್ಚಾಗಲಿದೆ, ಎಲ್ಲಾ ವಿದ್ಯಾರ್ಥಿಗಳು ನನ್ನಂತೆ ಆಗಲಿ ಎಂದು ಭಾವಿಸುವುದಿಲ್ಲ. ನನಗಿಂತ ಉನ್ನತ ಸ್ಥಾನಕ್ಕೇರಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಲಿ ಎಂಬುದೇ ನನ್ನ ಆಶಯವಾಗಿದೆ ಎಂದರು.

ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ದಿವ್ಯಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿ, ಅಕ್ಷರ, ಅನ್ನದಾಸೋಹಕ್ಕೆ ವೀರಶೈವ ಲಿಂಗಾಯತ ಮಠಗಳ ಕೊಡುಗೆ ಅಪಾರ, ಅಖಂಡ ಬಳ್ಳಾರಿ ಜಿಲ್ಲೆ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಲಿಂಗೈಕ್ಯ ಶ್ರೀ ಕೊಟ್ಟೂರು ಜಗದ್ಗುರುಗಳು 464 ಎಕರೆ ಭೂಮಿಯನ್ನು ಬಡಮಕ್ಕಳಿಗೆ ಶಿಕ್ಷಣಕ್ಕಾಗಿ ವೀ.ವಿ.ಸಂಘಕ್ಕೆ ನೀಡಿದೆ. ಕೊಟ್ಟೂರು ಜಗದ್ಗುರುಗಳು ವಿದ್ಯೆ ಅಭ್ಯಾಸಿಗರ ಕೈವಶವಾಗಲಿದೆ. ಕಾಲೇಜ್ ಹಂತದಲ್ಲಿ ಸ್ವಯಂಪ್ರೇರಿತವಾಗಿ ಅನೇಕ ಆಕರ್ಷಣೆಗಳಿಗೆ ಕಡಿವಾಣ ಹಾಕಿಕೊಳ್ಳಬೇಕು. ಸಾಧನೆಯ ಗುರಿ ತಲುಪುವವರೆಗೂ ಅನೇಕ ಅಡೆತಡೆಗಳು ಬರುತ್ತವೆ. ಗುರಿ ತಲುಪವರೆಗೂ ಎಲ್ಲೂ ಬೇಸರಿಸಿಕೊಳ್ಳಬಾರದು. ಸುಸ್ತಾಗಿದೆಯೆಂದು ವಿಶ್ರಾಂತಿಗೆ ಜಾರಬಾರದು. ಕಣ್ಣಿಗೆ ಕಾಣುವಆಕರ್ಷಣೆಗಳಿಗೆ ಒಳಗಾಗದೆ ಗುರಿ ತಲಪಲು ಶ್ರಮಿಸಬೇಕು. ಶ್ರಮವೊಂದೆ ಸಾಧನಗೆ ಹಾದಿ. ಕಷ್ಟಗಳಿಗೆ ಭಯಪಡದೆ ಪರಿಹಾರ ಹುಡುಕಿಕೊಳ್ಳುವ ಮನೋಭಾವ ಬೆಳಸಿಕೊಂಡಾಗ ಅಂದುಕೊಂಡದ್ದನ್ನು ಸಾಧಿಸಲು ಸಾಧ್ಯ ಎಂದರು.

ವಿಜಯನಗರ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಅಸುಂಡಿ ನಾಗರಾಜ ಗೌಡ ಮಾತನಾಡಿ, ಸ್ನಾತಕೋತ್ತರ ಶಿಕ್ಷಣಕ್ಕಾಗಿ ವಿದ್ಯಾರ್ಥಿಆಗಳು ಬೇರೆ ನಗರಗಳ ಅವಲಂಬಿಸಿದ್ದಾರೆ. ಜಿಲ್ಲಾ ಕೇಂದ್ರದಲ್ಲೆ ಕೆಲ ಸ್ನಾತಕೋತ್ತರ ಶಿಕ್ಷಣ ಆರಂಭಿಸಲು ವೀ.ವೀ.ಸಂಘ ಚಿಂತನೆ ನಡೆಸಿದೆ ಎಂದರು.

ಎಮ್ಮಿಗನೂರು ಶ್ರೀ ವಾಮದೇವ ಶಿವಾಚಾರ್ಯ ಮಹಾಸ್ವಾಮಿಗಳು ಅಧ್ಯಕ್ಷತೆವಹಿಸಿದ್ದರು. ಉತ್ತಂಗಿ ಶ್ರೀ ಸೋಮಶಂಕರ ಮಹಾಸ್ವಾಮಿಗಳು, ಕೊಟ್ಟೂರು ಶ್ರೀ ಡಾ.ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಹೂವಿನ ಹಡಗಲಿ ಶ್ರೀ ಡಾ.ಹಿರಿ ಶಾಂತವೀರ ಮಹಾಸ್ವಾಮಿಗಳು, ನಂದಿಪುರ ಪುಣ್ಯಕ್ಷೇತ್ರದ ಶ್ರೀ ಮಹೇಶ್ವರ ಸ್ವಾಮಿಗಳು, ವೀ.ವಿ.ಸಂಘದ ಸದಸ್ಯರಾದ ಗೊಗ್ಗಚನ್ನಬಸವರಾಜ, ಸಾಲಿ ಬಸವರಾಜ, ಕೆ.ರವಿಶಂಕರ, ಮಾವಿನಹಳ್ಳಿ ಎಸ್.ಬಸವರಾಜ, ಟಿ.ಏಕಾಂಬರೀಶ, ಹೆಚ್.ಎಸ್.ಶರಣುಸ್ವಾಮಿ, ಕೆ.ಸದಾಶಿವಪ್ಪ, ಜಿ.ವೀರೇಶ, ಅಮರೇಗೌಡ, ಸಿ.ಎಂ.ಶಿವಪ್ರಕಾಶ. ಕೆ.ಹೇಮರೆಡ್ಡಿ, ಯು.ಬಸವರಾಜಪ್ಪ ಉಪಸ್ಥಿತರಿದ್ದರು.

ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಪ್ರೋ.ಟಿ. ಸುಭಾಷ, ಎಚ್.ಎಂ.ನಿರಂಜನ ಮತ್ತು ಪ್ರಾಧ್ಯಾಪಕರಾದ ಡಾ.ಮೃತ್ಯುಂಜಯ ರುಮಾಲೆ, ಉಪನ್ಯಾಸಕ ಟಿ.ಎಂ.ಪ್ರಭುಸ್ವಾಮಿ ನಿರ್ವಹಿಸಿದರು.

# ನಿರುದ್ಯೋಗದ ನಿರ್ಮೂಲನೆಗೆ ತಿಪ್ಪೇಸ್ವಾಮಿ ಕೊಡುಗೆ ಅಪಾರ



**ಹಂಪಿ ಟೈಮ್ಸ್ ಕೂಡ್ಲಿಗಿ**

ಬದುಕಿರುವವರೆಗೂ ಅನ್ನ, ಅಕ್ಷರ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದವರು ಲಿಂಗೈಕ್ಯ ಕೆ.ಎಂ.ತಿಪ್ಪೇಸ್ವಾಮಿ ಎಂದು ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಜ್ಞಾನಭಾರತಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ.ಎಂ.ತಿಪ್ಪೇಸ್ವಾಮಿ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದರು. ಹಿಂದುಳಿದ ತಾಲೂಕಿನ ಬಡ ನಿರ್ಗತಿಕ ಮಕ್ಕಳಿಗೆ ಸುಸಜ್ಜಿತ ಶಿಕ್ಷಣ ದೊರೆಯಲಿ ಎನ್ನುವ ಸದಾಶಯ ಹೊಂದಿ ಕಳೆದ 40 ವರ್ಷಗಳ ಹಿಂದೆಯೇ ಕಾನಮಡುಗು ಹಾಗೂ ಕೂಡ್ಲಿಗಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದರು. ಪೂರ್ವ ಪ್ರಾಥಮಿಕ ಶಾಲೆಯಿಂದ ಬಿಇಡಿ ವರೆಗೂ ಶಿಕ್ಷಣವನ್ನು ವಿಧ್ಯಾರ್ಥಿಗಳಿಗಾಗಿ ನೀಡಿದವರಲ್ಲಿ ತಿಪ್ಪೇಸ್ವಾಮಿ ಮೊದಲಿಗರು. ಜೀವನದ ಸಂಧ್ಯಾಕಾಲದಲ್ಲಿರುವ ವೃದ್ದರಿಗೆ ಪುನಶ್ಚೇತನ ವೃದ್ದಶ್ರಮ ಹೆಸರಿನಡಿಯಲ್ಲಿ ವೃದ್ದಶ್ರಮ ತೆರೆದು ಅವರ ಪಾಲಿನ ದೇವರಾಗಿ ಕಂಡವರು ಲಿಂಗೈಕ್ಯ ತಿಪ್ಪೇಸ್ವಾಮಿಯವರು, ಆರೋಗ್ಯ ಕ್ಷೇತ್ರಕ್ಕೆ ಕಾಲಿಟ್ಟು ಸುಸಜ್ಜಿತ ಆಸ್ಪತ್ರೆ ನಿರ್ಮಿಸಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಈ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಿ ಅದರಲ್ಲೂ ಯಶಸ್ಸು ಕಂಡರು. ಹುಟ್ಟು ರಾಜಕಾರಣಿಯಾದರೂ ಯಾವುದೇ ಪದವಿಗಳನ್ನು ಅಪೇಕ್ಷಿಸದೇ ಜನ ಮುಖಿ ಕಾರ್ಯಗಳಲ್ಲೆ ತಮ್ಮನ್ನ ತೊಡಗಿಸಿಕೊಂಡು ಜನಾನುರಾಗಿಯಾದರು ಎಂದು ತಿಳಿಸಿದರು. ಪಕ್ಕದ ತಾಲೂಕಾದ ಹಗರಿ ಬೊಮ್ಮನಹಳ್ಳಿಯಲ್ಲೂ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಯಶ ಕಂಡರು.

ಕಳೆದ ಐದು ವರ್ಷಗಳಲ್ಲಿ ವೃತ್ತಿಪರ ಕೋರ್ಸ್‌ಗಳಾದ ಪ್ಯಾರಮೆಡಿಕಲ್, ಡಿ ಫಾರ್ಮ್, ಬಿ ಫಾರ್ಮ್ ಹಾಗೂ ಬಿಎಸ್ಸಿ ನರ್ಸಿಂಗ್ ಕೋರ್ಸ್ ಗಳನ್ನ ತೆರೆದು ಈ ಭಾಗದಲ್ಲಿನ ಯುವಕ, ಯುವತಿಯರ ನಿರುದ್ಯೋಗದ ಬರವನ್ನು ನೀಗಿದರು. ತಾಲೂಕಿನ ವಿಧ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜು ತೆರಯಬೇಕು ಎನ್ನುವ ಉದಾತ್ತ ಮನೋಭಾವದಿಂದ ಆರ್ಯುವೇದಿಕ್ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡಿದರು. ಸದಾ ಕ್ರಿಯಾಶೀಲರಾಗಿದ್ದ ತಿಪ್ಪೇಸ್ವಾಮಿಯವರು ಕೂಡ್ಲಿಗಿ ತಾಲೂಕು ಹಾಗೂ ಹಗರಿ ಬೊಮ್ಮನಹಳ್ಳಿಯಲ್ಲಿ ಶಿಕ್ಷಣದ ಕ್ರಾಂತಿಯನ್ನೇ ಮಾಡಿದರು.

ಧಾರ್ಮಿಕ ಶ್ರದ್ಧೆಯಲ್ಲಿ ಅತ್ಯಂತ ನಂಬಿಕೆ ಇಟ್ಟಿದ್ದ ಅವರು ಪಟ್ಟಣದಲ್ಲಿ ಅನೇಕ ಬಾರಿ ಪಂಚಪೀಠದ ಪೀಠಾಚಾರ್ಯರನ್ನು ಆಹ್ವಾನಿಸಿ ಧಾರ್ಮಿಕ ಕಾರ್ಯಕ್ರಮಗಳನ್ನು ಅನೂಚಾನವಾಗಿ ನಡೆಸಿದರು. ಅಲ್ಲದೆ ಹಗರಿ ಬೊಮ್ಮನಹಳ್ಳಿಯಲ್ಲಿ ರಂಬಾಪುರಿ ರೇಣುಕಾ ಚಾರ್ಯ ಮಂದಿರವನ್ನು ನಿರ್ಮಾಣ ಮಾಡಿ, ಜಗದ್ಗುರು ರೇಣುಕಾಚಾರ್ಯರ ಪರಮ ಭಕ್ತರಾಗಿದ್ದರು. ಆಡು ಮುಟ್ಟದ ಸೊಪ್ಪಿಲ್ಲ, ತಿಪ್ಪೇಸ್ವಾಮಿಯವರು ಮುಟ್ಟದ ಕ್ಷೇತ್ರಗಳೇ ಇಲ್ಲ ಎನ್ನುವಷ್ಟು ಸಮಾಜಮುಖಿಯಾಗಿ, ಧಣಿವರಿಯದೇ ಸಮಾಜಕ್ಕೆ ಹಾಗೂ ಶಿಕ್ಷಣಕ್ಕೆ ಅನೇಕ ಕೊಡುಗೆಗಳನ್ನ ನೀಡಿದರು ಎಂದು ಸ್ಮರಿಸಿದರು. ಅವರ ಬದುಕಿನುದ್ದಕ್ಕೂ ಹೀಗೆ ಸರ್ವ ಸಾಮನ್ಯರಿಗಾಗಿ ಅವರ ಬದುಕು ಸಮರ್ಪಿತವಾಗಿತ್ತು ಎಂದು ಗುಣಗಾನ ಮಾಡಿದರು.

ಡೋಣುರು ಚಾನುಕೋಟಿ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಬೆಂಗಳೂರಿನ ಬಂಡೆಮಠ ಪೀಠಾಧ್ಯಕ್ಷ ಸಚ್ಚಿದಾನಂದ ಸ್ವಾಮಿಗಳು, ಕಾನಮಡುಗು ದಾಸೋಹ ಮಠದ ಐಮಡಿ ಶರಣಾರ್ಯರು, ಉದ್ಯಮಿ ಗುಳಿಗೆ ವೀರೇಂದ್ರ, ಚಿತ್ರದುರ್ಗದ ಬಾಪೂಜಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ.ಎಂ.ವೀರೇಶ್, ಬಿಜೆಪಿ ಮಂಡಲ ಅಧ್ಯಕ್ಷ ಕಾಮಶೆಟ್ಟಿ ನಾಗರಾಜ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ ಸೇರಿದಂತೆ ಶಿಕ್ಷಣ ಸಿಬ್ಬಂದಿಗಳು ಇದ್ದರು.

# ಜನರಿಗೆ ನಿಖರ ಮಾಹಿತಿ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ ದೊಡ್ಡದು

### ಡಿಎಚ್‌ಒ ಶಂಕರ್ ನಾಯ್ಕ ಹೇಳಿಕೆ | ರಾಷ್ಟ್ರೀಯ ಕಾರ್ಯಕ್ರಮ ಅನುಷ್ಠಾನ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರದ ಸೌಲಭ್ಯಗಳ ಮಾಹಿತಿಯನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ ಬಹಳ ಮುಖ್ಯ ಎಂದು ಡಿಎಚ್‌ಒ ಶಂಕರ್ ನಾಯ್ಕ ತಿಳಿಸಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ ಕಾರ್ಯಕ್ರಮ ಕುರಿತು ಮಾಧ್ಯಮ ಮಿತ್ರರಿಗೆ ಹಮ್ಮಿಕೊಂಡ ಕಾರ್ಯಾಗಾರದಲ್ಲಿ ಶನಿವಾರ ಮಾತನಾಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮವನ್ನು ಪತ್ರಿಕೆಗಳು ಮಾಹಿತಿ ನೀಡುವ ಕೊಂಡಿಗಳಂತೆ ಕರ್ತವ್ಯ ನಿರ್ವಹಿಸುತ್ತವೆ. ಗ್ರಾಮೀಣ ಪ್ರದೇಶದ ಜನರಿಗೆ ಸರ್ಕಾರದ ಸೌಲಭ್ಯಗಳ ಮಾಹಿತಿ ಸುಲಭವಾಗಿ ದೊರೆಯಬೇಕು. ಇಂತಹ ಮಾಹಿತಿ ನೀಡುವ ಕಾರ್ಯಕ್ರಮಗಳು ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ನಡೆಯಬೇಕು. ಕಳೆದ ಎರಡು ವರ್ಷಗಳ ಹಿಂದೆ ಬಂದಂತಹ ಕೋವಿಡ್ ಅನ್ನು ಆರೋಗ್ಯ ಇಲಾಖೆ ಯಶಸ್ವಿಯಾಗಿ ನಿಭಾಯಿಸಿದೆ. ಪಲ್ಸ್ ಪೋಲಿಯೋ ಲಸಿಕೆಯನ್ನು ಯಶಸ್ವಿಯಾಗಿ ನೀಡಿ 2014 ರಲ್ಲಿ ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರ ಎಂದು ಘೋಷಿಸಲಾಗಿದೆ. 2025ಕ್ಕೆ ದೇಶವನ್ನು ಕುಷ್ಟರೋಗ ಮುಕ್ತ ಮಾಡಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಡಿಟಿಒ ಡಾ.ಜಗದೀಶ್ ಪಾಟ್ನೆ ಮಾತನಾಡಿ, ಕ್ಷಯ ರೋಗದ ಲಕ್ಷಣಗಳು ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಜ್ವರ, ಕಫ, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಬೆವರು ಬರುವುದು, ಹಸಿವು ಆಗದೆ ಇರುವುದು, ತೂಕ ಕಡಿಮೆ ಆಗುವ ಲಕ್ಷಣಗಳು ಕಂಡುಬರುವ ಪ್ರತಿಯೊಬ್ಬರೂ ಸಾರ್ವಜನಿಕ ಆಸ್ಪತ್ರೆ ಆರೋಗ್ಯ ಸಮುದಾಯ ಕೇಂದ್ರಗಳಲ್ಲಿ ಉಚಿತವಾಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಷಯರೋಗ ಪತ್ತೆಯಾದ ವ್ಯಕ್ತಿಗೆ ಆರು ತಿಂಗಳು ಉಚಿತ ಚಿಕಿತ್ಸೆ ನೀಡಿ ರೋಗ ಗುಣಪಡಿಸಲಾಗುವುದು. ಜನರಿಗೆ ಕ್ಷಯ ರೋಗದ ಬಗ್ಗೆ ಅರಿವು ಮೂಡಿಸುವ ಮೂಲಕ ರೋಗ ಹರಡುವುದನ್ನು ತಡೆಗಟ್ಟಬಹುದು. ಇದು ಕೇವಲ ಶ್ವಾಸಕೋಶ ಮಾತ್ರವಲ್ಲ, ಕಣ್ಣು, ಕಿವಿ ಸೇರಿ ದೇಹದ ಎಲ್ಲ ಭಾಗಗಳಿಗೂ ಹರಡುತ್ತದೆ. ಹಾಗಾಗಿ, ಸರಿಯಾದ ಚಿಕಿತ್ಸೆ ನೀಡುವುದರಿಂದ ಈ ರೋಗವನ್ನು ಗುಣಪಡಿಸಬಹುದು. ರೋಗವನ್ನು ನಿಯಂತ್ರಣಕ್ಕೆ ತರುವ ನಿಟ್ಟಿನಲ್ಲಿ ಸಾರ್ವಜನಿಕರು

>> 2

## ವಚನ ಅರಿವು

### ಅಹಿಂಸೆಯೇ ಧರ್ಮ

**ಆವ ಪ್ರಾಣಿಗೆಯೂ ನೋವ ಮಾಡಬೇಡ**
**ಪರನಾರಿಯರ ಸಂಗಬೇಡ.**
**ಪರಧನಕ್ಕಳುಪಬೇಡ, ಪರದೈವಕ್ಕೆರಗಬೇಡ.**
**ಈ ಚತುರ್ವಿಧ ತವಕವ ಮಾಡುವಾಗ**
**ಪರರು ಕಂಡಾರು, ಕಾಣರು ಎಂದೆನಬೇಡ.**
**ಬಳ್ಳೇಶ್ವರಲಿಂಗಕ್ಕಾರು ಮರೆಮಾಡಬಾರದಾಗಿ**
**ಅಘೋರನರಕದಲ್ಲಿಕ್ಕುವ.**

**– ಬಳ್ಳೇಶ ಮಲ್ಲಯ್ಯ**

ಅಹಿಂಸೆ ಶರಣರ ಮೂಲ ಉದ್ದೇಶ. ಸಕಲ ಜೀವಾತ್ಮರಿಗೆ ಒಳ್ಳೆಯದನ್ನೇ ಬಯಸುವುದು ಶರಣರ ಮುಖ್ಯತತ್ವ. ಮನುಷ್ಯ ಯಾವ ಪ್ರಾಣಿಗೂ ನೋವು ಕೊಡದಂತೆ ಬದುಕಬೇಕು. ತನ್ನಂತೆ ಅದರದ್ದು ಜೀವ ಎಂದು ಭಾವಿಸಬೇಕು. ಜೊತೆಗೆ ತನು, ಮನ, ಭಾವ ಶುದ್ಧವಾಗಿರಬೇಕು. ಹೀಗೆ ಶುದ್ಧವಾಗಿರಬೇಕೆಂದರೆ ಬೇರೆಯವರ ಸ್ತ್ರೀಯರನ್ನು, ಬೇರೆಯವರ ಹಣ, ಆಸ್ತಿ, ಒಡವೆಗಳಿಗೆ ಆಸೆ ಮಾಡಬಾರದು. ಇಷ್ಟಲಿಂಗವನ್ನು ಆರಾಧಿಸುವ ಮೂಲಕ ಲಿಂಗವನ್ನು ಬಿಟ್ಟು ಅನ್ಯ ದೇವರನ್ನು ಪೂಜಿಸಬಾರದು. ಈ ನಾಲ್ಕು ಬಗೆಯ ಶುದ್ಧ ಆಚರಣೆಗಳನ್ನು ಮಾಡಿದರೆ ಮನುಷ್ಯ ತನು, ಮನ, ಭಾವ ಶುದ್ಧವಾಗಿ ನಡೆನುಡಿಯಲ್ಲಿ ಶುದ್ಧವಾಗಿರುತ್ತಾನೆ. ಒಂದು ವೇಳೆ ಬೇರೆಯವರಿಗೆ ಕಾಣದಂತೆ ಅಥವ ಕಂಡಿಲ್ಲ ಎನ್ನುವ ಭಾವದಿಂದ ಅನೈತಿಕ ಕೆಲಸಗಳನ್ನು ಮಾಡಿದರೆ ಬಳ್ಳೇಶ್ವರಲಿಂಗಕ್ಕೆ ತಿಳಿದೇ ತಿಳಿಯುತ್ತದೆ. ನಿಮಗೆ ಘೋರ ನರಕದಂತ ಶಿಕ್ಷೆಯನ್ನು ನೀಡುತ್ತಾನೆ ಎಂದು ಎಚ್ಚರಿಸುತ್ತಾನೆ ಶರಣ ಬಳ್ಳೇಶ ಮಲ್ಲಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮಾಧ್ಯಮಗಳ ಪಾತ್ರ ದೊಡ್ಡದು

**ಮೊದಲ ಪುಟದಿಂದ**

ನಿರ್ಲಕ್ಷ್ಯ ಧೋರಣೆ ಅನುಸರಿಸಬಾರದು. ಕ್ಷಯ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯೂ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದರು.

ಸರ್ವೇಕ್ಷಣಾಧಿಕಾರಿ ಡಾ.ಷಣ್ಮೂಖ ನಾಯ್ಕ ಮಾತನಾಡಿ, ನಾಯಿ ಕಚ್ಚಿದ ತಕ್ಷಣ ಗಾಯವನ್ನು ಸೋಪು ಮತ್ತು ನೀರಿನಿಂದ ಸತತ 15 ನಿಮಿಷಗಳ ಕಾಲ ತೊಳೆಯುವುದರಿಂದ ಶೇ.50ರಷ್ಟು ರೇಬಿಸ್ ಬರದಂತೆ ತಡೆಗಟ್ಟಲು ಸಾಧ್ಯ. ರೇಬಿಸ್ ಕಾಯಿಲೆಯು ಲಿಸ್ಸಾ ವೈರಸ್ ಸೋಂಕಿನಿಂದ ಉಂಟಾಗುವ ಮೆದುಳು ಮತ್ತು ನರಮಂಡಲಕ್ಕೆ ಸಂಬಂಧಿಸಿದ ಕಾಯಿಲೆಯಾಗಿದೆ. ಕಾಯಿಲೆ ಗುಣಲಕ್ಷಣಗಳು ಕಾಣಿಸಿಕೊಂಡ ನಂತರ ಬದುಕುಳಿಯಲು ಸಾಧ್ಯವಿಲ್ಲದ ಭಯಾನಕ ಕಾಯಿಲೆ ಆಗಿದೆ. ಅದ್ದರಿಂದ ರೇಬಿಸ್ ರೋಗ ನಿರೋಧಕ ಲಸಿಕೆಯನ್ನು 0, 3, 7, 14 ಮತ್ತು 28ನೇ ದಿನದಂದು ತಪ್ಪದೇ ಪಡೆಯುವ ಮೂಲಕ ಭಯಾನಕ ಕಾಯಿಲೆಯಿಂದ ರಕ್ಷಣೆ ಪಡೆಯಬೇಕೆಂದು ಸಲಹೆ ನೀಡಿದರು.

ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ರಾಧಿಕಾ ಮಾತನಾಡಿ, ಆಯುಷ್ಮಾನ ಭಾರತ ಆರೋಗ್ಯ ಕರ್ನಾಟಕದ ಯೋಜನೆಯಲ್ಲಿ ಒಟ್ಟು 1650 ಖಾಯಿಲೆಗಳಿಗೆ ಬಿಪಿಎಲ್ ಕಾರ್ಡದಾರರಿಗೆ 5 ಲಕ್ಷ ರೂ. ಹಾಗೂ ಎಪಿಎಲ್ ಕಾರ್ಡದಾರರಿಗೆ 1.50 ಲಕ್ಷ ರೂಗಳ ವರೆಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು ಅಲ್ಲದೆ, ಈ ಯೋಜನೆಯಲ್ಲಿ ಕೋವಿಡ್‌ನ್ನು ಸೇರಿಸಲಾಗಿದೆ ಎಂದು ಹೇಳಿದ ಅವರು ಜಿಲ್ಲೆಯಲ್ಲಿ ಅಬಾ ಆರೋಗ್ಯ ಕಾರ್ಡ ಯೋಜನೆಯಲ್ಲಿ ಲಕ್ಷಾಂತರ ಜನ ಕಾರ್ಡ ಪಡೆದಿದ್ದಾರೆ. ಆರೋಗ್ಯ ಇಲಾಖೆಯ ಅನೇಕ ಕಾರ್ಯಕ್ರಮಗಳ ಸದುಪಯೋಗವನ್ನು ಪಡೆಯಲು ಸಾರ್ವಜನಿಕರು ಮುಂದೆ ಬರಬೇಕು ಎಂದು ಹೇಳಿದರು.

ಆರ್.ಸಿ.ಎಚ್ ಜಂಬಯ್ಯನಾಯಕ, ವೈದ್ಯೆ ಡಾ.ಕಮಲಮ್ಮ, ಆರೋಗ್ಯ ಇಲಾಖೆಯ ಎಂ.ಧರ್ಮನಗೌಡ, ದೊಡ್ಡಮನಿ ಇತರರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

# ದಾಸ ಶ್ರೇಷ್ಠ, ಪುರಂದರ ದಾಸರ ನೆಲ ಹಂಪಿ

**ಹಂಪಿ ಒಳನೋಟ**
**ಎಂ.ಎಂ.ಶಿವಪ್ರಕಾಶ**
**ಹೊಸಪೇಟೆ**



ಹಂಪಿಯ ಪ್ರಕೃತಿದತ್ತವಾದ ಹೆಬ್ಬಂಡೆ ಬೆಟ್ಟಗಳ ನಡುವೆ ಮೂಡಣದ ಕಡೆಗೆ ಶತ ಶತಮಾನಗಳಿಂದ ಹರಿಯುತ್ತಿರುವ ಅಂದಿನ ಪಂಪಾ ನದಿಯೇ ಇಂದಿನ ತುಂಗಭದ್ರೆಯಾಗಿ ಸದಾ ಜೀವಂತವಾಗಿ ಹರಿಯುತ್ತಲೇ ಇದ್ದಾಳೆ. ಈ ತುಂಗಭದ್ರ ನದಿಯ ಪವಿತ್ರ ಪುಣ್ಯಭೂಮಿಯ ತಟದಲ್ಲಿ ಋಷಿಮುನಿಗಳು, ಸಂತರು, ಕವಿಗಳು, ಆಚಾರ್ಯ ರು,ನೂರೊಂದು ವಿರಕ್ತರು, ಶರಣರು,ಅನುಭಾವಿಗಳು ಹಾಗೂ ದಾಸವರಣ್ಯರು ಈ ನೆಲದಲ್ಲಿ ನಡೆದಾಡಿದ್ದಾರೆ, ಬದುಕಿ ಬಾಳಿಹೋಗಿದ್ದಾರೆ. ಇಲ್ಲಿಯ ಬೆಟ್ಟ ಬಂಡೆ,ಗವಿಗಳಲ್ಲಿ ಕುಳಿತು ಮಹಾಕಾವ್ಯಗಳನ್ನು ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಹಾಗಾಗಿ ಹಂಪಿಯು ಬಹುದೊಡ್ಡ ಸಾಹಿತ್ಯ ಸಂಗೀತ,, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದದ್ದು. ಕ್ರಿಸ್ತಶಕ ಐದನೇ ಶತಮಾನದಿಂದ ಇಲ್ಲಿಯ ತನಕ ಹಂಪಿಯು ಪುಣ್ಯ ಪುರುಷರ ನೆಲೆಬೀಡಾಗಿದೆ. ಮಾತಂಗ ಮುನಿಯ ಬೃಹದ್ದೇಶಿ, ವಿದ್ಯಾರಣ್ಯರ ಸಂಗೀತಸಾರದಿಂದ ಹಿಡಿದು ಪ್ರೌಢದೇವರಾಯನ ಲಕ್ಕಣ್ಣ ದಂಡೀಶನ ಶಿವ ತತ್ವ ಚಿಂತಾಮಣಿ, ನೂರೊಂದು ವಿರಕ್ತರ ವಚನ ವಿಮರ್ಶೆ,ಟೀ ಕುಗಳು, ಹರಿಹರ ,ರಾಘವಾಂಕ, ನಂಜುಂಡಕವಿ, ಚಂದ್ರಶೇಖರ ಕವಿಯ ಪಂಪ ವಿರೂಪಾಕ್ಷ ಸ್ಥಾನವರ್ಣಂ ಹಾಗೂ ಹರಿದಾಸರ ವರೆಗೆದಾಸ ಪರಂಪರೆಯ ನೆಲ ಹಂಪಿ. ವ್ಯಾಸರಾಯರು, ಪುರಂ ರದಾಸರು, ಕನಕದಾಸರು ವಚನ ಸಾಹಿತ್ಯದಂತೆ ದಾಸ ವಾಣಿಯಿಂದ ಸಮಾಜವನ್ನು ತಿದ್ದುವ ದಿಶೆಯಲ್ಲಿ ಕೀರ್ತನೆ ಸುಳ್ಳಾದಿ ಉಗಾ ಭೋಗಗಳನ್ನ ರಚಿಸಿ ಹಾಡಿ ದಾಸರ ಚಿಂತನೆ ಆಶಯಗಳನ್ನು ಮನೆಮನೆಗೆ ತಲುಪಿಸುವಲ್ಲಿ ಹಂಪಿ ಹರಿದಾಸರು ಮಹತ್ವದ ಪಾತ್ರವನ್ನು ಸಮಾಜದಲ್ಲಿ ನಿರ್ವಹಿಸಿದ್ದಾರೆ. ಹರಿದಾಸರ ಹಾಗೂ ವೈಷ್ಣವಾಚಾರ್ಯರ ದರ್ಶನ ಚಿಂತನ ಥರ ಮೊದಲಾದವುಗಳನ್ನು ಆನೆಗುಂದಿಯ ಒಂಬತ್ತು ಶ್ರೀ ಮದ್ವಚಾರ್ಯರುಗಳು ಈ ನೆಲದಲ್ಲಿ ಭಕ್ತಿಯ ಆಧ್ಯಾತ್ಮದ ಹೊನಲನ್ನು ಹರಿಸಿ ನವ ಬೃಂದಾವನದಲ್ಲಿ ಬೃಂದಾವನಸ್ಥರಾದವರು.ದಾಸ ಪರಂಪರೆಯಲ್ಲಿ ವ್ಯಾಸ ತೀರ್ಥರಿಂದ ದಾಸರೆಂದರ ' ಪುರಂದರ ದಾಸರಯ್ಯ ಎಂದು ಹಾಡಿಹೋಗಳಿಸಿ ಕೊಂಡವರು ಪುರಂದರದಾಸರು. ಇವರು ಹಂಪಿಯಲ್ಲಿ ಇದ್ದು ತಮ್ಮ ಕೀರ್ತನೆಗಳಿಂದ ಹಾಗೂ ಕರ್ನಾಟಕ ಸಂಗೀತಕ್ಕೆ ಕೊಟ್ಟ ಕೊಡುಗೆ ಯಿಂದಾಗಿ ಇವರನ್ನು ಕರ್ನಾಟಕ ಸಂಗೀತದ ಪಿತಾಮಹಾರೆಂದೇ ಕರೆದಿದ್ದಾರೆ. ಅವರ ಕುರಿತ ಒಂದು ಪರಿಚಯ.

ವಿಜಯನಗರ ಸಾಮ್ರಾಜ್ಯದ ಸಂಗಮ ಅರಸರ ಕಾಲದಲ್ಲಿ ಹಂಪಿಯ ವಿರೂಪಾಕ್ಷನೆ ಅಧಿದೈವನಾಗಿದ್ದ ಅವನೇ ಅರಸ ನಾವು ಅವನ ಪ್ರತಿನಿಧಿ ಎಂದು ಸಂಗಮ ಅರಸರು ಆಳ್ವಿಕೆ ನಡೆಸಿದರು. ತಮ್ಮ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ಎಂದೆ ಸಹಿ ಮಾಡಿದ್ದಾರೆ ಇದಕ್ಕೂ ಮೊದಲು ಹರಿಹರನು ಸಹ ಪಂಪಾಪುರದ ಅರಸ ಶ್ರೀ ವಿರೂಪಾಕ್ಷನೆಂದು ಕಾವ್ಯವನ್ನು ಬರೆದ. ವಿರುಪಾಕ್ಷನೆ ಕವಿ ನಾನು ಅವನ ಲಿಪಿಕಾರ ಎಂದು ವಿರೂಪಾಕ್ಷನನ್ನು ಆರಾಧಿಸಿದ. ಹರಿಹರನಿಗೆ ವಿರುಪಾಕ್ಷನೆ ಕವಿ ನಾನು ಅವನ ಲಿಪಿಕಾರನೆಂದರೆ ಸಂಗಮ ವಂಶದ ಅರಸರು ವಿರುಪಾಕ್ಷನೆ ದೊರೆ ನಾವು ಅವನ ಪ್ರತಿನಿಧಿಗಳು ಎಂದು ಆಳ್ವಿಕೆ ನಡೆಸಿದ ಜಗತ್ತಿನ ದೇವರ ರಾಜ್ಯವೆಂದರೆ ಅದು ಹಂಪೆಯ ಸಂಗಮ ವಂಶದ ವಿಜಯನಗರ ಸಾಮ್ರಾಜ್ಯ ಹೀಗಾಗಿ ಆ ಕಾಲಘಟ್ಟದಲ್ಲಿ ಹಂಪಿಗೆ ವಿರುಪಾಕ್ಷನೆ ದೇವರು ಹಾಗೂ ಅರಸನಾಗಿದ್ದ. ಆದರೆ ಸಂಗಮ ವಂಶದ ಅರಸತ್ತಿಗೆ ನಂತರ ಬಂದ ಸಾಳವವಂಶದ ನರಸಿಂಹ ಅರಸ ನಂತರ ನರಸ ನಾಯಕ ನಂತರ ವೀರನರಸಿಂಹ ಅರಸರು ಆಳ್ವಿಕೆ ಮಾಡಿದರು ಇವರ ಕಾಲಘಟ್ಟದಲ್ಲಿ ಮುಳುಬಾಗಿಲಿನ ಶ್ರೀ ಪಾದರಾಜರ ಶಿಷ್ಯರಾಗಿದ್ದ ವ್ಯಾಸರಾಯರು ವಿಜಯನಗರಕ್ಕೆ ಬಂದರು ನಂತರ ಕೃಷ್ಣದೇವರಾಯನ ಕಾಲದಲ್ಲಿ ವ್ಯಾಸರಾಯರೇ ರಾಜಗುರುಗಳಾಗಿದ್ದರು. ಕೃಷ್ಣದೇವರಾಯನಿಗೆ ಒದಗಿ ಬಂದಿದ್ದ ಕುಹ ಯೋಗವನ್ನು ನಿವಾರಿಸಲು ಈ ಸಂದರ್ಭದಲ್ಲಿ ವಿಜಯನಗರ ಸಿಂಹಾಸನವನ್ನು ವ್ಯಾಸ ತೀರ್ಥರು ಅಲಂ ಕರಿಸಿದರು ಹೀಗಾಗಿ ಇವರು ವ್ಯಾಸರಾಜ ರೆಂದು ಪ್ರಸಿದ್ಧಿ ಪಡೆದರು. ಇವರು ವಿಜಯ ನಗರದ ಆರುಜನ ಅರಸರಿಗೆ ರಾಜಗುರುಗಳಾಗಿದ್ದವರು. ಹಾಗೇನೆ ಶ್ರೀ ಪುರಂದಾಸರು ಕನಕದಾಸರಿಗೆ ದಾಸ ದೀಕ್ಷೆ ನೀಡಿದವರು.

ವ್ಯಾಸರಾಜರ ಶಿಷ್ಯರಾಗಿದ್ದ ಪುರಂದಾಸರು ಹಂಪೆಯಲ್ಲಿ ನೆಲೆ ನಿಂತವರು. ಪುರಂದಾಸರು ಮಹಾರಾಷ್ಟ್ರದಿಂದ ಬಂದವರು ಎನ್ನುವ ವಾದವಾಗಿತ್ತು ಆದರೆ ಇವರು ಕರ್ನಾಟಕ ದವರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.ಆದರೆ ಕಮಲಾಪುರದ ಕ್ರಿಸ್ತಶಕ 1526 ಶಾಸನ ಒಂದರ ಪ್ರಕಾರ ಪುರಂದಾಸರು ಕಮಲಾ ಪುರದಲ್ಲಿ ನೆಲೆಸಿದ್ದವರು ಇವರಿಗೆ ನಾಲ್ಕುಜನ ಮಕ್ಕಳಿದ್ದರೂ ಎಂಬ ಬಗ್ಗೆ ಮಾಹಿತಿ ಇದೆ. ಇವರ ಮನೆತನ ಚಿನ್ನದ ವ್ಯಾಪಾರದ ವೃತ್ತಿ ಯನ್ನು ಹೊಂದಿದವರಾಗಿದ್ದವರು. ಇವರು ಹಂಪಿಯೊಂದಿಗೆ ವ್ಯಾಪಾ ರದ ಸಂಬಂಧ ವನ್ನು ಹೊಂದಿದ್ದವರು. ಇವರು ತಮ್ಮ

ಇಪ್ಪತ್ತ ನೆಯ ವಯಸ್ಸಿಗೆ ಹಂಪಿಗೆ ಬಂದಿರುತ್ತಾರೆ.

ವ್ಯಾಸರಾಜರಿಂದ ದೀಕ್ಷೆ ಪಡೆ ದ ದಿನದಿಂದ ಇವರು ಶ್ರೀನಿವಾಸ ಹೆಸ ರಿನ ಬದಲು ಪುರಂದರ ವಿಠಲನೆಂದು ಕರೆದುಕೊಂಡರು ಎನ್ನಲಾಗಿದೆ . ಇವರು ಮುಂದೆ ತಮ್ಮ ಎಲ್ಲಾ ಕೀರ್ತನೆಗಳಿಗೆ ಪುರಂದರ ವಿಠಲನ ಅಂಕಿತವನ್ನೇ ಬಳಸಿಕೊಂಡಿದ್ದಾರೆ .ಹಂಪಿಯ ವಿಜಯ ವಿಠಲನೆ ಪುರಂದರನ ವಿಠಲ ಎನ್ನುವುದನ್ನು ವಿದ್ವಾಂಸರು ಖಚಿತಪಡಿಸಿದ್ದಾರೆ. ಇವರ ಮನೆತನ ಶ್ರೀಮಂತದಿಂದ ಕೂಡಿದ್ದರು ಇವರು ಎಲ್ಲವನ್ನು ತ್ಯಾಗ ಮಾಡಿ ಹಂಪಿಗೆ ಬಂದು ಇಲ್ಲಿನ ಬಜಾರ ಗಳಲ್ಲಿ ಕೀರ್ತನೆ ಗಳನ್ನು ಹಾಡುತ್ತಾ ದಾಸ ಸೇವೆ ಯನ್ನು ಮಾಡಿದ್ದಾರೆ .ಇವರು ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ.ಕ್ರಿ.ಶ. 1484ರಿಂದ 1564ರ ಕಾಲದಲ್ಲಿ ಇವರ ಹಂಪೆಯಲ್ಲಿ ಇದ್ದರು ಎನ್ನುವುದು ತಿಳಿದು ಬರುತ್ತದೆ .ತಮ್ಮ ಬದುಕನ್ನೆಲ್ಲ ದಾಸಸಾಹಿತ್ಯಕ್ಕೆ ಮುಡುಪಾಗಿಟ್ಟದ್ದವರು.ವ್ಯಾಸರಾಜರ ಶಿಷ್ಯರಾಗಿದ್ದ ಇವರು, ದಾಸ ಪರಂಪರೆ ಅನುಷ್ಠಾನ ಪ್ರಚಾರವನ್ನು ಕಂಡು ಹಾಗೂ ಇವರ ಸಾವಿರಾರು ಕೀರ್ತನೆಗಳನ್ನು ಗಮನಿಸಿದ ವ್ಯಾಸ ತೀರ್ಥರು ದಾಸರೆಂದರೆ ಪುರಂದರ ದಾಸರಯ್ಯ ಎಂದು ಕೀರ್ತನೆಯನ್ನೇ ರಚಿಸಿದ್ದಾರೆ ಇಂತಹ ದಾಸ ಶ್ರೇಷ್ಠ ಪುರಂದಾಸರು ಹಂಪಿಯಲ್ಲಿದ್ದು ಕನ್ನಡದಲ್ಲಿ ಕೀರ್ತನೆಗಳನ್ನು ಸುಳಾದಿಗಳನ್ನು ಬರೆದು ರಚಿಸಿ ಹಾಡಿದವರು.

ಹಂಪಿಯ ದಾಸ ಪರಂಪರೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಹಂಪಿಯಲ್ಲಿ ವ್ಯಾಸರಾಯರ ನೇತೃತ್ವದಲ್ಲಿ ದಾಸ ಸಾಹಿತ್ಯ ಜನಪ್ರಿಯತೆಯನ್ನು ಪಡೆದಿತ್ತು. ಹೀಗಾಗಿ ಹಂಪೆಯ ಪರಿಸರವನ್ನು ದಾಸ ಕೂಟದ ಪರಂಪರೆಯ ನೆಲವೆಂದು ಕರೆಯಲಾಗಿದೆ. ಪುರಂದರ ದಾಸರಿಗಿಂತ ಮೊದಲೇ ದಾಸ ಪರಂಪರೆ ರಚನೆಗೊಂಡಿದ್ದರು, ಅದು ಹೆಚ್ಚು ಜನಪ್ರಿಯವಾಗಿದ್ದು ಪುರಂದಾಸರ ಕೀರ್ತನೆಗಳಿಂದ . ಪುರಂದಾಸರ ಕೀರ್ತನೆಗಳು ರಚನೆಯಾದ ಮೇಲೆ ದಾಸ ಸಾಹಿತ್ಯಕ್ಕೆ ಒಂದು ಹೊಸ ಚೇತನ ಉಂಟಾಯಿತು ಹಾಗೂ ದಾಸ ಸಾಹಿತ್ಯದ ಸಂಗೀತಕ್ಕೆ ಒಂದು ಹೊಸ ಪರಂಪರೆ ಸೃಷ್ಟಿಯಾಯಿತು. ಹೀಗಾಗಿ ದಾಸ ಸಾಹಿತ್ಯವನ್ನು ಪುರಂದರ ಯುಗವೆಂದು ಪರಿಗಣಿಸಲಾಗಿದೆ ಪುರಂದಾಸರು ತಮ್ಮ ದಾಸ ಸಾಹಿತ್ಯ ಮತ್ತು ಸಂಗೀತದಲ್ಲಿ ಸರಳವಾದ ಸಾಹಿತ್ಯ ಮತ್ತು ಸಂಗೀತವನ್ನು ಪ್ರಾರಂಭಿಸಿದವರು ಇವರು ಜನಸಾಮಾನ್ಯರಿಗೂಅಭ್ಯಾಸಕ್ಕೆಅನುಕೂಲವಾಗುವಂತೆ ಮಾಯ ಮಾಳವ ಗೌಡ ಎಂಬ ರಾಗವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಸರಳ ವರಸೆ ಜಂಟಿ ವರಿಸಿ ಅಲಂಕಾರ ಮೊದಲಾದವುಗಳನ್ನು ರಚಿಸಿದವರು. ಇವರು ಹಾಕಿಕೊಟ್ಟ ಸಂಗೀತದ ಪರಂಪರೆ ಇವತ್ತಿಗೂ ಮುಂದುವರಿದುಕೊಂಡು ಬಂದಿದೆ .ಅವರು ಕಲಿಯಲು ಅನುಕೂಲವಾಗುವಂತೆ ಹಾಗೂ ಹೀಗೂ ಆಕರ್ಷಕವು ಆಗಿರುವಂತ ಸಂಗೀತ ಜೋಡಣೆಯನ್ನು ಮಾಡಿದವರು. ಅವರ ಲಂಬೋದರ ಹಂಬಾಸುತ ಅಮರ ವಿನುತ..., ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ ಎಂಬ ನೂರಾರು ಕೀರ್ತನೆಗಳು ಇವತ್ತಿಗೂ ಜನಪ್ರಿಯವಾಗಿವೆ. ಇವರ ಮತ್ತೊಂದು ಸಾಧನೆ ಎಂದರೆ ಜಾನಪದ ಮಟ್ಟುಗಳಿಗೆ ಶಾಸ್ತ್ರೀಯವಾದ ರಾಗಗಳನ್ನು ಜೋಡಿಸಿದ್ದು ಇದರಿಂದಾಗಿ ರಾಗಗಳಲ್ಲಿ ವೈವಿಧ್ಯತೆ ಮತ್ತು ಸರಳತೆ ಎರಡನ್ನು ಸಾಧಿಸಲು ಯಶಸ್ವಿಯಾದವರು. ಹೀಗಾಗಿ ಇವರ ಕೀರ್ತನೆಗಳು, ಜನಪ್ರಿಯವಾದವು ಹಾಗೂ ಸಮಾಜದಲ್ಲಿ ಇವರ ಸಂಗೀತ ಕೀರ್ತನೆಗಳು ಪ್ರಭಾವ ಶಾಲಿಯಾದ ಮಾಧ್ಯ ಮವಾಗಿ ಜನರೊಂದಿಗೆ ಸಂವಹನ ಮಾಡಲು ಇವರು ಯಶಸ್ವಿಯಾದರು

ಪುರಂದಾಸರು ಸಾಹಿತ್ಯ ಸಂಗೀತ ಹಾಗೂ ಆಧ್ಯಾತ್ಮಗಳ ತ್ರಿವೇಣಿ ಸಂಗಮವಾಗಿದ್ದಾರೆ. ಅವರು ಪುರಾಣ ತೀರ್ಥಕ್ಷೇತ್ರಗಳ ಮೇಲೆ ಜನತೆಯ ಧರ್ಮದ ಆಚರಣೆಗಳ ಮೇಲೆ ಹಬ್ಬ ಹರಿದಿನಗಳ ಮೇಲೆ ಮಾನವನ ಜನ್ಮದ ಮೇಲೆ ದೇವರ ಮೇಲೆ, ದೇವರನಾಮಗಳನ್ನು ,ಕೀರ್ತನೆಗಳನ್ನು ರಚಿಸಿ ಜನಪ್ರಿಯ ರಾಗಿದ್ದಾರೆ. ಶ್ರೀಮಂತಿಕೆಯಲ್ಲಿ ನವಕೋಟಿ ನಾರಾಯಣ ಎಂದು ಕರೆಸಿಕೊಂಡಿದ್ದ ಪುರಂದಾಸರು ತಮ್ಮ ಬದುಕಿನಲ್ಲಿ ಎಲ್ಲವನ್ನು ತ್ಯಾಗ ಮಾಡಿ ಹಂಪಿಗೆ ಬಂದು ಹರಿದಾಸ ಸಾಹಿತ್ಯವನ್ನೇ ಅಪ್ಪಿಕೊಂಡು ಒಪ್ಪಿಕೊಂಡು ಅದರಲ್ಲಿ ಐಕ್ಯರಾದವರು ಯಾವ ಮುತ್ತುರತ್ನಗಳನ್ನ ಮಾರುಕಟ್ಟೆಯಲ್ಲಿಟ್ಟು ಮಾರಾಟ ಮಾಡುತ್ತಿದ್ದ ವಿಜಯನಗರದ ಸಾಮ್ರಾಜ್ಯದಲ್ಲಿ ತಮ್ಮ ಎಲ್ಲ ಶ್ರೀಮಂತಿಕೆಯನ್ನು ತ್ಯಾಗ ಮಾಡಿ ಕೈಯಲ್ಲಿ ತಂಬೂರಿಯನ್ನು ಹಿಡಿದು ಬೀದಿ ಬೀದಿಗಳಲ್ಲಿ ಅಲೆದು ದಾಸ ಸಾಹಿತ್ಯವನ್ನು ದಾಸ ದಾಸ ಕೀರ್ತನೆಗಳನ್ನು ಮನೆ ಮನೆಗೆ ತಲುಪಿಸಿ ಜನರನ್ನು ಸತ್ಯ ನ್ಯಾಯ ನಿಷ್ಠೆ ಸನ್ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿದ್ದವರು ಪುರಂದಾಸರು.

ಪುರಂದಾಸರು ಸಂಗೀತಕ್ಕೆ ಹಾಕಿಕೊಟ್ಟ ಪರಂಪರೆಯನ್ನೇ ಮುಂದೆ ಬಂದ ಅನೇಕರು ಮುಂದುವರಿಸಿ ಕೊಂಡು ಬಂದವರು. ಹೀಗಾಗಿ ಕರ್ನಾಟಕ ಸಂಗೀತದ ಸೀಮಾಪುರುಷರಂದೆ ಹೆಸರಾದ ತ್ಯಾಗರಾಜರು ಸಹ ಪುರಂದರದಾಸರನ್ನು ಸ್ತುತಿಸಿದ್ದಾರೆ. ಹಾಗೇನೆ ವ್ಯಾಸರಾಜರು ಸಹ ತಮ್ಮ ಶಿಷ್ಯನನ್ನ ಹಾಡಿ ಹೊಗಳಿದ್ದಾರೆ ಹೀಗೆ ಕರ್ನಾಟಕದ ಸಂಗೀತ ಪರಂಪರೆಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟು ಅದು ಈ ಹೊತ್ತಿನಲ್ಲಿಯು ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಕರ್ನಾಟಕ ಸಂಗೀತವೆಂದು ಪ್ರಸಿದ್ಧಿ ಪಡೆಯಲು ಪುರಂದಾಸರೇ ಕಾರಣರಾಗಿದ್ದಾರೆ .ಹೀಗಾಗಿ ಕರ್ನಾಟಕ ಸಂಗೀತದ ಪಿತಾಮಾಹ ಎಂದರೆ ಪುರಂದರದಾಸರಂದೆ ಕರೆಯಲಾಗುತ್ತಿದೆ. ಪುರಂದರದಾಸರು ದಾಸ ಪರಂಪರೆಗೆ ,ಸಂಗೀತಕ್ಕೆ ಕೊಟ್ಟ ಕೊಡುಗೆಗಾಗಿ ಹಂಪೆಯ ತುಂಗಭದ್ರ ನದಿಯ ತಟದಲ್ಲಿ ಪುರಂದರ ಮಂಟಪವನ್ನು ಅಂದಿನ ಅರಸರು ನಿರ್ಮಿಸಿದ್ದಾರೆ. ಹಂಪಿಗೆ ಬಂದವರು ಪುರಂದರ ಮಂಟಪಕ್ಕೆ ಬಂದು ವೀಕ್ಷಿಸಿ ಕೆಲಕಾಲ ಮಂಟಪದಲ್ಲಿ ಕುಳಿತು ದಾಸರನ್ನು ಸ್ಮರಿಸಿಕೊಂಡು ಹೋಗುತ್ತಿದ್ದಾರೆ.



Purandaradasa and his Children.

# ಭೂ ಸುಧಾರಣಾ ಕಾಯ್ದೆ 2020ಕ್ಕೆ ತಿದ್ದುಪಡಿ ತರಲಾಗುವುದು

### ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ | ರೈತ ಸಮಾವೇಶ | ನಂಜುಂಡಸ್ವಾಮಿಯವರು ಕಡೆಯವರೆಗೂ ರೈತರ ಪರವಾಗಿ ಕ್ರಿಯಾಶೀಲವಾಗಿದ್ದರು.

**■ ಹಂಪಿ ಟೈಮ್ಸ್ ಬೆಂಗಳೂರು**

ರೈತರು ನೀಡಿದ ಹಕ್ಕೊತ್ತಾಗಳನ್ನು ಗಂಭೀರವಾಗಿ ಪರಿಗಣಿಸಿ, ಕೇಂದ್ರದ ಬಿಜೆಪಿ ಸರ್ಕಾರ ಜಾರಿ ಮಾಡಿರುವ ರೈತ ವಿರೋಧಿ "ಭೂ ಸುಧಾರಣಾ ಕಾಯ್ದೆ 2020"ಕ್ಕೆ ತಿದ್ದುಪಡಿ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಫ್ರೀಡಂಪಾರ್ಕ್ ನಲ್ಲಿ ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 88ನೇ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ರೈತ ಸಮಾವೇಶನ್ನು ಉದ್ಘಾಟಿಸಿದ ಬಳಿಕ ರೈತ ಪರ ಬಜೆಟ್ ರೂಪಿಸಲು ರೈಸ ಸಂಘ ನೀಡಿದ ಹಕ್ಕೊತ್ತಾಯಗಳನ್ನು ಸ್ವೀಕರಿಸಿ ಮಾತನಾಡಿದರು.

ನಂಜುಂಡಸ್ವಾಮಿಯವರು ಸಂಘಟಿಸಿದ ಸ್ಟಡಿ ಸರ್ಕಲ್ ಮೂಲಕ ಹಲವು ವಿಚಾರಗಳ ಒಳನೋಟ ದೊರೆಯಿತು. ಸಮಾಜವಾದಿ ಆರ್ಥಿಕತೆ, ಸಮಾಜವಾದಿ ರಾಜಕಾರಣದ ಬಗ್ಗೆ ಸ್ಪಷ್ಟತೆ ಸಿಕ್ಕಿತು. ಈ ಸ್ಟಡಿ ಸರ್ಕಲ್ ಗೆ ಬಹಳ ಮಂದಿ ಉಪನ್ಯಾಸಕರು, ಪ್ರೊಫೆಸರ್‌ಗಳು, ಸಾಹಿತಿಗಳು ಬರುತ್ತಿದ್ದರು. ಇವರೆಲ್ಲರ ಮಾರ್ಗದರ್ಶನ ನನಗೆ ಅನುಕೂಲವಾಯಿತು ಎಂದರು.



ನಂಜುಂಡಸ್ವಾಮಿಯವರು ಕಡೆಯವರೆಗೂ ರೈತರ ಪರವಾಗಿ ಕ್ರಿಯಾಶೀಲವಾಗಿದ್ದರು. ಸಮಾಜವಾದಿ ಆಶಯಗಳ ಪರವಾಗಿದ್ದ ಇವರು ಬೆಳೆಸಿದ ರೈತ ಚಳವಳಿ ರೈತರ ಸಮಸ್ಯೆ ಪರಿಹಾರಕ್ಕೆ ಆಸರೆ ಆಯಿತು. ರೈತ ಹೋರಾಟ ಮತ್ತು ರೈತ ಸಮಾವೇಶಗಳಲ್ಲಿ ಭಾಗವಹಿಸುವುದು ನನಗೂ ಬಹಳ ಸಂತಸ ಮತ್ತು ಹೆಮ್ಮೆಯ ವಿಷಯ. ನಂಜುಂಡಸ್ವಾಮಿ ಮತ್ತು ರೈತ ಹೋರಾಟ ಸಮಾಜ ಮತ್ತು ಸರ್ಕಾರಗಳ ಮೇಲೆ ಪರಿಣಾಮ ಬೀರಿದೆ ಎಂದರು.

ನಂಜುಂಡಸ್ವಾಮಿಯವರ ರೈತ ಹೋರಾಟ ನನಗೆ ರಾಜಕೀಯ ಪ್ರೇರಣೆ ಎಂದು ಮುಖ್ಯಮಂತ್ರಿ ಸಿ.ಎಂ.ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಸ್ಮರಿಸಿದರು.

ಬಡಗಲಾಪುರ ನಾಗೇಂದ್ರ ಅವರು ಅಧ್ಯಕ್ಷತೆ ವಹಿಸಿದ್ದ ರೈತ ಸಮಾವೇಶದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರಾದ ಆಳಂದ ಶಾಸಕ ಬಿ.ಆರ್. ಪಾಟೀಲ್, ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ದಲಿತ ಮುಖಂಡ ಮಾವಳ್ಳಿ ಶಂಕರ್, ಹಿಂದುಳಿದ ಮತ್ತು ಶೋಷಿತ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾದ ರಾಮಚಂದ್ರಪ್ಪ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಸಂಚಾಲಕರಾದ ಕುಮಾರ್ ಸಮತಳ ಸೇರಿ ಹಲವು ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

# ಪರಿವರ್ತನೆ

ಹುಬ್ಬಳ್ಳಿಯಲ್ಲಿ ನೆಲೆಸಿದ್ದ ತನ್ನ ಅತ್ತೆ ನೆನ್ನೆ ತಾನೇ ಊರಿಗೆ ಬಂದಿದ್ದು ಇಂದು ಮುಂಜಾನೆಯಿಂದ ತಮ್ಮ ಕೋಣೆಯಿಂದಲೂ ಹೊರಬರದೆ ಸಿಡಿಮಿಡಿಗುಟ್ಟುತ್ತಿರುವುದನ್ನು ಕಂಡು ಮಾಧವಿ ನಸುನಗುತ್ತಾ ಅತ್ತೆಗೆ ಇಷ್ಟವಾಗುವ ಸ್ಟ್ರಾಂಗ್ ಚಹಾ ತಯಾರಿಸಿ ಎರಡು ಕಪ್ಪಿಗೆ ಸೋಸಿ ಟ್ರೇಯಲ್ಲಿ ಇಟ್ಟುಕೊಂಡು ಅತ್ತೆಯ ಕೋಣೆಯತ್ತ ನಡೆದಳು. ಮಂಚದ ಮೇಲೆ ಕೂತಿದ್ದ ಅತ್ತೆಯ ಕೈಗೆ ಚಹಾದ ಕಪ್ ಇರಿಸಿ ತಾನೊಂದು ಕಪ್ ತೆಗೆದುಕೊಂಡು ಅತ್ತೆಯ ಮುಂದೆ ಕುಳಿತುಕೊಂಡಳು.

ಮಾತನಾಡದೆ ಸುಮ್ಮನೆ ಚಹಾ ಹೀರಿದ ಅತ್ತೆ ಲಕ್ಷ್ಮಮ್ಮ ಕಪ್ಪನ್ನು ಸೊಸೆಯ ಕೈಗೆ ಹಿಂತಿರುಗಿಸುತ್ತಾ ಈ ಮನೆಯಲ್ಲಿ ಏನು ನಡೆಯುತ್ತಿದೆ ಎಂದು ಸ್ವಲ್ಪವಾದರೂ ಅರಿವಿದೆಯೇ ನಿನಗೆ??. ಎಂದು ಕೇಳಿದರು.

ಅದಕ್ಕುತ್ತರವಾಗಿ ಮಾಧವಿ, ಏನಾಯ್ತು ಅತ್ತೆ ಎಂದು ಕೇಳಿದಳು. ಈ ಮನೆಯಲ್ಲಿ ಹಿರಿಯರು ಕಿರಿಯರು ಎಂಬ ನಿಯಮಗಳೆಲ್ಲ ಅಳಿಸಿ ಹೋಗಿವೆ. ನಿನ್ನ ಸೊಸೆ ನಿನಗಿಂತ ಮುಂಚೆಯೇ ತಿಂಡಿ ತಿನ್ನುತ್ತಾಳೆ. ನೀನು ಅದು ಹೇಗೆ ಸುಮ್ಮನಿರುವೆಯೋ ನಾ ಕಾಣೆ. ನಿನಗೆ ತಗ್ಗಿ ಬಗ್ಗಿ ನಡೆಯುವುದೂ ಇಲ್ಲ. ಹೇಗೆ ಸಹಿಸಿಕೊಳ್ಳುತ್ತಿರುವೆ ಎಂದು ಮಾಧವಿಯನ್ನು ಪ್ರಶ್ನಿಸಿದರು.

ನಸುನಕ್ಕ ಮಾಧವಿ... ಅತ್ತೆ, ನಿಮಗೆ ನೆನಪಿಲ್ಲದಿರಬಹುದು ಆದರೆ ಸುಮಂತನ ಬಸಿರಿಯಲ್ಲಿ ನನಗೆ ಹಸಿವಿನಿಂದ ಪ್ರಾಣ ಸಂಕಟವಾಗುತ್ತಿತ್ತು ಆದರೆ ನೀವು ತಿನ್ನದ, ಉಣ್ಣದ ವಿನಾ ನಮಗೆ ತಿನ್ನುಣ್ಣಲು ಅವಕಾಶ ಇರಲಿಲ್ಲ. ಹಸಿವು ತಾಳದೆ ಅದೊಮ್ಮೆ ನಾನು ಊಟ ಮಾಡಲು ಪ್ರಯತ್ನಿಸಿದಾಗ ನೀವು ಮಾಡಿದ ರಂಪಾಟ ನನ್ನ ಹಸಿವೆಯನ್ನೇ ಸುಟ್ಟು ಹಾಕಿತ್ತು. ಮುಂದೆಂದು ಆ ಸಾಹಸ ಮಾಡಲಿಲ್ಲ ನಾನು. ಆದರೆ ನೀವು ಒಂದರ ಹಿಂದೊಂದು ಕಪ್ಪು ಚಹಾ ಸೇವಿಸುತ್ತಾ ತಡವಾಗಿ ಸ್ನಾನ ಮಾಡಿ ತಿಂಡಿ ಸೇವಿಸುವ ಹೊತ್ತಿಗೆ 11ರ ಗಡಿ ದಾಟುತ್ತಿತ್ತು. ನಿಮಗಾಗಿ ಕಾಯುತ್ತಾ ಮನೆಯ ಎಲ್ಲರ ಬೇಕು ಬೇಡಗಳನ್ನು ನೋಡಿಕೊಂಡು, ಮಕ್ಕಳನ್ನು ಶಾಲೆಗೆ ಕಳುಹಿಸಿ ಸ್ನಾನ ಪೂಜೆ ಮುಗಿಸಿ ತಿಂಡಿ ತಿನ್ನಬೇಕೆಂದರೂ ನಿಮಗಾಗಿ ಕಾಯಲೇಬೇಕಿತ್ತು. ಅದೇ ಎಷ್ಟೇ ಸಿರಿ ಸಂಪತ್ತಿದ್ದರೂ ಫ್ರಿಜಿನಲ್ಲಿ ಹಣ್ಣುಗಳಿದ್ದರೂ, ಕೈಗೆಟಕುವಂತೆ ತಿಂಡಿ ತಿನಿಸುಗಳು ಮಾಡಿನಲ್ಲಿದ್ದರೂ ತಿನ್ನದ ಪರಿಸ್ಥಿತಿ. ಎಷ್ಟೋ ಬಾರಿ ನೀವು ಬರುವ ಮುನ್ನ ಮಕ್ಕಳಿಗೆ ಹಾಲು ಕೊಡುವಾಗ ಹಸಿವು ತಾಳದೆ ಚಹಾದಲ್ಲಿ ಬ್ರೆಡ್ ಅದ್ದಿ ತಿಂದದ್ದು ಉಂಟು. ಆಗೆಲ್ಲ ನನ್ನ ಮನೆಯಲ್ಲಿ ನಾನೇ ಕದ್ದು ತಿಂದಂತಹ ಹತಾಶೆಯ ಭಾವ.

ಇದೀಗ ಅತ್ತೆಯಾಗಿ ನನ್ನ ಸರದಿ. ನಾನು ಅನುಭವಿಸಿದ ನೋವು ಸಂಕಟ ನನ್ನ ಸೊಸೆಗೆ ಬೇಡ. ಬೆಳಗಿನ ಜಾವ ನಮ್ಮ ನಮ್ಮ ಕೆಲಸಗಳ ಗಡಿಬಿಡಿ ಯಲ್ಲಿ ನಾವೆಲ್ಲರೂ ಒಟ್ಟಿಗೆ ತಿಂಡಿ ತಿನ್ನಲು ಆಗದು. ನಾನು ಕೂಡ ನನ್ನ ಬೆಳಗಿನ ಕೆಲಸಗಳು ಮುಗಿದರೆ ಆಕೆಗಾಗಿ ಕಾಯದೆ ತಿಂಡಿ ತಿನ್ನುತ್ತೇನೆ ಒಂದೊಮ್ಮೆ ಆಕೆ ನನಗಿಂತ ಮುಂಚೆ ಸ್ನಾನ ಪೂಜೆ ಮಾಡಿದ್ದರೆ ಆಕೆಯು ಕೂಡ ನನಗೆ ಕಾಯದಂತೆ ತಿನ್ನಲು ಹೇಳುತ್ತೇನೆ.

ಅಡುಗೆ ಮನೆಯಲ್ಲಿಯೂ ಅಷ್ಟೇ ನಾವಿಬ್ಬರೂ ಸೇರಿ ಹರಟುತ್ತಾ ಅಡುಗೆ ಮಾಡುತ್ತೇವೆ. ಮನೆಯ ಎಲ್ಲ ಸದಸ್ಯರೂ ಕುಳಿತು ಒಟ್ಟಿಗೆ ಮಧ್ಯಾಹ್ನ ಮತ್ತು ರಾತ್ರಿಯ ಊಟವನ್ನು ಮಾಡುತ್ತೇವೆ. ಇದರಿಂದ ಯಾರಿಗೆ ಯಾವ ಪದಾರ್ಥ ಇಷ್ಟ, ಏನು ತಿನ್ನುವರು ಯಾವುದನ್ನು ತಿನ್ನುವುದಿಲ್ಲ ಎಂಬುದನ್ನು ಅರಿಯಲು ಸಾಧ್ಯ. ಜೊತೆಗೆ ನಾವೆಲ್ಲ ಕೂಡಿ ಊಟ ಮಾಡುವುದರಿಂದ ಒಂದು ರೀತಿಯ ಸಮಾಧಾನ ನೆಮ್ಮದಿ ಉಂಟಾಗುತ್ತದೆ.

ಈಗ ಹೇಳಿ ಅತ್ತೆ, ಅಂದು ನೀವು ನಡೆಸಿಕೊಂಡ ರೀತಿಯನ್ನು ನಾನು ದೂಷಿಸುವುದಿಲ್ಲ ಆದರೆ ನಾನು ಕೂಡ ಹಾಗೆಯೇ ನಡೆಯಲು ನನಗೆ ಮನಸ್ಸಿಲ್ಲ. ಪ್ರತಿಯೊಬ್ಬರಿಗೂ ವ್ಯಕ್ತಿಗತ ಆಸೆ ಆಕಾಂಕ್ಷೆಗಳು ಇರುತ್ತವೆ. ನಮಗೆ ಹೆದರಿ ತಗ್ಗಿ ಬಗ್ಗಿ ನಡೆಯುವುದರ ಬದಲು ನಮ್ಮೊಂದಿಗೆ ಪ್ರೀತಿ ವಿಶ್ವಾಸದಿಂದ ನಡೆಯುವವರು ಬೇಕಲ್ಲವೇ?? ಎಂದು ಮಾಧವಿ ಹೇಳಿದಳು.

ಕಣ್ಣಂಚಿನಲ್ಲಿ ಹನಿಯುತ್ತಿದ್ದ ಕಣ್ಣೀರನ್ನು ತೊಡೆದು ಅಯ್ಯೋ ಕಂದ! ಅತ್ತೆತನದ ಹಮ್ಮಿನಲ್ಲಿ ನಿಮ್ಮನ್ನು ಅರ್ಥಮಾಡಿಕೊಳ್ಳದೆ ಹೋದೆ. ಅತ್ತೆ ಅಂದರೆ ದರ್ಪದಿಂದ ಇರಬೇಕು ಎಂಬ ಹಳೆಯ ಕಾಲದ ಆಚಾರಕ್ಕೆ ಜೋತು ಬಿದ್ದು ನಿಮ್ಮೊಂದಿಗೆ ಸಲಿಗೆಯಿಂದ ವರ್ತಿಸಲೇ ಇಲ್ಲ. ನನ್ನ ಕಣ್ಣು ತೆರೆಸಿದೆ ನೀನು! ಇನ್ನ್ಯಾವತ್ತೂ ನೀವಿಬ್ಬರೂ ಅತ್ತೆ ಸೊಸೆಯರ ನಡುವೆ ನಾನು ಬರುವುದಿಲ್ಲ ನನ್ನನ್ನು ಕ್ಷಮಿಸಿ ಬಿಡು ಎಂದು ಗದ್ಗದಿತರಾದರು.

ಅತ್ತೆಯ ಎರಡೂ ಕೈಗಳನ್ನು ತನ್ನ ಕೈಯಲ್ಲಿ ಹಿಡಿದು ಅತ್ತೆ ಇದರಲ್ಲಿ ನನ್ನ ತಪ್ಪೂ ಇದೆ, ನಾನು ಕೂಡ ಪರಂಪರೆಗೆ ಜೋತು ಬಿದ್ದು ನಿಮಗೆ ಅರ್ಥ ಮಾಡಿಸಲು ಹೋಗಲೇ ಇಲ್ಲ. ನಿಮಗೆ ಸರಿಯಾಗಿ ಅರ್ಥ ಮಾಡಿಸದೆ ನನ್ನನ್ನು ನಾನು ಅಮಾಯಕಳು ಎಂಬಂತೆ ಸ್ವಾನುಕಂಪದ ಬೇಗೆಯಲ್ಲಿ ಬೆಂದು ಹೋದೆ. ಮುಂದೆ ನನ್ನ ತವರಿನಲ್ಲಿ ನನ್ನ ಅತ್ತಿಗೆ ತನ್ನ ಅತ್ತೆ ಅಂದರೆ ನನ್ನ ಅಮ್ಮನಿಗೆ ನಿಸೂರಾಗಿ ಅತ್ತಿಯರ ...ಹಸಿವಾಗುತ್ತಿದೆ ಊಟ ಮಾಡೋಣ ಬನ್ನಿ ಅಂತ ಹೇಳಿ ಅದಕ್ಕೆ ನನ್ನಮ್ಮ ಕೂಡ ಒಪ್ಪಿ ಅವರೆಲ್ಲರೂ ಒಟ್ಟಿಗೆ ಊಟ ಮಾಡುತ್ತಿದ್ದದ್ದನ್ನು ಕಂಡಾಗ ನನಗೆ ನಾನು ಮಾಡಿದ ತಪ್ಪಿನ ಅರಿವಾಯಿತು. ನಾನೆಂದು ನನ್ನ ಹಸಿವನ್ನು ನಿಮಗೆ ತೋರಗೊಡಲೇ ಇಲ್ಲ. ಅದು ನನ್ನ ತಪ್ಪಲ್ಲವೇ ಎಂದು ಕೇಳಿದಳು.

ಹೌದು ಮಾಧವಿ, ನನಗೆಂದೂ ಈ ಬಗ್ಗೆ ವಿಚಾರ ಮಾಡಲು ಆಸ್ಪದ ಸಿಕ್ಕೇ ಇಲ್ಲ. ನನಗೆ ಕೈ ಕಾಲು ಗಟ್ಟಿ ಇದ್ದರೂ ನಿನ್ನಿಂದಲೇ ಮನೆ ಕೆಲಸ ಮಾಡಿಸುತ್ತಿದ್ದೆ. ಒಂದು ಬಾರಿಯೂ ಸಹಾಯಕ್ಕೆ ಬರಲೇ ಇಲ್ಲ. ಆದರೆ ಈ ಬಗ್ಗೆ ನೀನೆಂದು ಎದುರಾಡಲೇ ಇಲ್ಲ. ಆದ್ದರಿಂದಲೇ ನಾನು ತಪ್ಪು ಮಾಡುತ್ತಿದ್ದೇನೆ ಎಂದು ನನಗೆ ಅನಿಸಲಿಲ್ಲ. ನನ್ನ ತಪ್ಪನ್ನು ಹೊಟ್ಟೆಗೆ ಹಾಕಿಕೊಂಡು ಬಿಡು ತಾಯಿ ಎಂದು ಎರಡು ಕೈಗಳನ್ನು ಎತ್ತಿ ಮುಗಿಯುತ್ತಾ ಮತ್ತೊಮ್ಮೆ ಹನಿಗಣ್ಣಾದರು.

ಮುಗಿದ ಎರಡು ಕೈಗಳನ್ನು ಕೈಯಲ್ಲಿ ಹಿಡಿದ ಮಾಧವಿ ಇರಲಿ ಬಿಡಿ ಅತ್ತೆ, ಕೂಸು ಅಳದ ಹೊರತು ತಾಯಿಯೇ ಹಾಲು ಕುಡಿಸುವುದಿಲ್ಲ, ನಿಮ್ಮ ತಪ್ಪಿನಲ್ಲಿ ನನ್ನ ಪಾಲೂ ಇದೆಯಲ್ಲ ಎಂದು ಹೇಳಲು ಸೊಸೆಯನ್ನು ಮೆಲ್ಲನೆ ತಬ್ಬಿ ಹಿಡಿದರು ಮಾಧವಿಯ ಅತ್ತೆ.

ನಡೆ, ಮಧ್ಯಾಹ್ನದ ಅಡುಗೆಗೆ ಅದೇನು ತರಕಾರಿಗಳು ಬೇಕೋ ಹೆಚ್ಚಿಕೊಡುತ್ತೇನೆ ಎಂದು ಕಪ್ಪುಗಳನ್ನು ಕೈಯಲ್ಲಿ ಹಿಡಿದು ಅಡುಗೆ ಮನೆಯತ್ತ ನಡೆದ ಸೊಸೆಯನ್ನು ಹಿಂಬಾಲಿಸಿದರು. ಅಲ್ಲೆಲ್ಲೋ ಎಫ್ ಎಂ ನಲ್ಲಿ ಹಳೆ ಬೇರು ಹೊಸ ಚಿಗುರು ಕೂಡಿದರೆ ಮರ ಸೊಗಸು ಎಂಬ ಹಾಡು ಇಂಪಾಗಿ ಕೇಳಿಸುತ್ತಿತ್ತು.





ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

# ಹರ ಮುನಿದರೂ ಗುರು ಕಾಯ್ವನು

ಒಂದು ಮಾತಿದೆ ಜೀವನದಲ್ಲಿ ಏನಾದರು ಮಾಡಬೇಕೆಂದರೆ ಒಂದು ಸ್ಪಷ್ಟವಾದ ಗುರಿ ಇರಬೇಕು, ಜೊತೆಗೆ ನಮ್ಮ ಬೆನ್ನ ಹಿಂದೆ ಒಬ್ಬ ಒಳ್ಳೆಯ ಗುರುವಿನ ಮಾರ್ಗದರ್ಶನವಿರಬೇಕು ಆಗ ಮಾತ್ರ ನಾವು ಅಂದುಕೊಂಡಂತಹ ಕೆಲಸದಲ್ಲಿ, ಕೈಗೊಂಡಂತಹ ಕಾರ್ಯದಲ್ಲಿ ಯಶಸ್ವಿಯಾಗಲು ಸಾಧ್ಯ ಎನ್ನುತ್ತೇವೆ ಅಲ್ಲವೆ? ಏಕೆ ಹಾಗೆ ಎಂದರೆ ಒಮ್ಮೆ ಯೋಚಿಸಿ ಈ ಪ್ರಕೃತಿಯಲ್ಲಿ, ಮಾನವನ ಜೀವನದಲ್ಲಿ ಅನೇಕ ವಿಚಾರಗಳು, ವಿಸ್ಮಯಗಳು ನಮಗೆ ಗೊತ್ತಿರದ ಅಗೋಚರ ಘಟನೆಗಳು, ಅತಿ ಮಾನುಶ ಶಕ್ತಿಗಳ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ, ಏಕೆಂದರೆ ಮಾನವನು ಈ ಪ್ರಕೃತಿಯಲ್ಲೇ ಈ ಪ್ರಕೃತಿಗಯ ಜೊತೆಗೆ ಇಲ್ಲೇ ಇರಬೇಕು, ಪ್ರತಿನಿತ್ಯ ಅವನು ಅತ್ಯಂತ ನಿಕಟವಾದ ಮತ್ತು ಬಿಡಿಸಲಾಗದ ಆಳವಾದಂತಹ ಸಂಬಂದವನ್ನು ಈ ಪ್ರಕೃತಿಯೊಂದಿಗೆ ಹೊಂದಿರುತ್ತಾನೆ.

ಹಾಗಾಗಿ ಈ ಪ್ರಕೃತಿಗೂ ಮತ್ತು ಮಾನವನಿಗೂ ಹಲವಾರು ಬಿಡಿಸಲಾಗದ ಸಂಬಂದ, ಏಕೆಂದರೆ ಮಾನವನೂ ಸಹ ಪ್ರಕೃತಿಯ ಇತರೆ ಎಲ್ಲಾ ಪಶು ಪಕ್ಷಿಗಳಂತೆ ಕ್ರಿಮಿ ಕೀಟಗಳಂತೆ ಪ್ರಕೃತಿಯ ಒಂದು ಅಂಶವೇ ಆಗಿದ್ದಾನೆ ಅಲ್ಲವೇ ? ಆದರೂ ಪ್ರಕೃತಿಯಲ್ಲಿ ನೆಡೆಯುವ ಅನೇಕ ವಿದ್ಯಾಮಾನಗಳು ಅವನನ್ನು ಚಕಿತ ಗೊಳಿಸುತ್ತಿದ್ದವು ಮತ್ತು ಕೆಲವು ಸಲ ಅವನ ಅಜ್ಞಾನದಿಂದಾಗಿ ಅವನಲ್ಲಿ ಭಯವನ್ನು ಉಂಟುಮಾಡುತ್ತಿದ್ದವು! ಹಾಗೆಯೆ ಪ್ರಕೃತಿಯಲ್ಲಿನ ಈ ವಿಕೋಪಗಳು ಮಾನವನ ಮೇಲೆ ಅವನ ಜೀವನ ಪದ್ದತಿಯ ಮೇಲೆ ಅನೇಕ ರೀತಿ ಅನುಕೂಲಗಳು ಮತ್ತು ಅನಾನುಕೂಲಗಳನ್ನು ತಂದೊಡ್ಡುತ್ತಿದ್ದವು ಅಂತಹ ಸಂದರ್ಭದಲ್ಲಿ ಏನು ಮಾಡಬೇಕು ಎನ್ನುವುದು ತೋಚದೆ ಕುಳಿತ ಮಾನವನ ಸಹಾಯಕ್ಕೆ ಬಂದ ಕೆಲ ಬುದ್ದಿವಂತಹ ಮಹಾನ್ ಜ್ಞಾನಿಗಳೆ ಗುರುಗಳು ಎಂದರೆ ತಪ್ಪಾಗಲಾರದು.

ಏಕೆಂದರೆ ಅವರು ಮಾನವರ ಈ ರೀತಿಯ ಕಳವಳಕ್ಕೆ ಕಳಕಳಿಯಾದರು, ಅಂದಿನಿಂದಲೇ ಈ ಗುರು ಪರಂಪರೆ ಮನುಕುಲಕ್ಕೆ ಒಳಿತು ಮಾಡುವ ಸಂಕಲ್ಪ ತೊಟ್ಟಿತು ಎನ್ನಬಹುದು. ಪ್ರಕೃತಿಯಲ್ಲಿನ ವಿಸ್ಮಯಗಳು ಸಹಜ ಎಂಬದನ್ನು ಅರಿತು ಅದರ ಕುರಿತು ಹೆಚ್ಚಿನ ಜ್ಞಾನವನ್ನು ತಿಳಿದುಕೊಂಡು ಅದನ್ನು ಇತರರಿಗೆ ತಿಳಿಸಲು ಆರಂಭಿಸಿದ ಅವರೇ ಗುರುಗಳಾದರು ಹಾಗೂ ಅವರ ಬಳಿ ಇಂತಹ ವಿಚಾರಗಳನ್ನು ತಿಳಿದುಕೊಳ್ಳಲು ಬಂದಂತಹ ಸಾಮಾನ್ಯ ಮಾನವರು ಶಿಷ್ಯರಾದರು. ಇದು ಮುಂದೆ ಗುರು ಶಿಷ್ಯ ಪರಂಪರೆಯಾಗಿ ಮುಂದುವರಿಯುತು.

ಹರ ಮುನಿದರೂ ಗುರು ಕಾಯ್ವನು, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ. ಈ ಎಲ್ಲಾ ಸಾಲುಗಳ ಸಾರವನ್ನು ನೋಡಿದಾಗ ನಮಗೆ ಗುರುವಿನ ಆಗಾದವಾದ ಅನಂತ ಅನವರತ ಮಹಾ ಶಕ್ತಿಯ ಪರಿಚಯ ವೇದ್ಯವಾಗುತ್ತದೆ. ಆಚರ?ಯರು, ಗುರುಗಳು, ಮಾರ್ಗದರ್ಶಕ, ಉಪನ್ಯಾಸಕ, ಶಿಕ್ಷಕರಾದಿಯಾಗಿ ಬಳಕೆಯಲ್ಲಿರುವ ಈ ಎಲ್ಲಾ ಪದಗಳು ಕೇವಲ ಪದಗಳಾಗಿದ್ದರೆ ನಾವಿಂದು ಕೇವಲ ಜೀವಜಗತ್ತಿನಲ್ಲಿ ಉಳಿದೆಲ್ಲಾ ಪ್ರಾಣಿಗಳಂತೆ ನಾವೂ ಒಂದು ಪ್ರಾಣಿಯಾಗಿರುತ್ತಿದ್ದೆವು. ಜೀವವಿಕಾಅಸದ ಹಾದಿಯಲ್ಲಿ ಹೋಮೋ ಸೇಪಿಯನ್ ಸ್ಪೀಶೀಸ್ ನ ಗುಂಪಿಗೆ ಸೀಮಿತವಾಗಿ ಮಂಗನಂತೆ ಮರವೇರಿ ಸೊಪ್ಪು ತರಗೆಲೆಗಳನ್ನು ತಿಂದುಕೊಂಡು ಕಾಡು ಮೇಡುಗಳಲ್ಲಿ, ಗುಹೆ ಪೊಟರೆಗಳಲ್ಲಿ ಅವಿತು ಸಂಸಾರ ಹೂಡಿರುತ್ತಿದ್ದೆವು! ಆದರೆ ಎಂದು ಈ ಗುರು, ಮಾರ್ಗದರ್ಶಕ, ಶಿಕ್ಷಕ ಎನ್ನುವ ವ್ಯಕ್ತಿ, ಅದರ ಹಿಂದಿನ ಶಕ್ತಿ ಮಾನವನ ಜಾನಾಂಗದ ಸ್ರ?ಶಕ್ಕೆ ಅಥವಾ ಮಾನವನು ಎಂದಿನಿಂದ ಗುರುವಿನ ಉಪವಾಸಕ್ಕೆ, ಸಾಮೀಪ್ಯಕ್ಕೆ ಮತ್ತವನ ಸಾನಿದ್ಯಕ್ಕೆ ಬಂದನೊ ಅಂದಿನಿಂದಲೇ ಮಾನವ ಮಾನವೀಯ, ಮಾನವತೆಯ ಬದಲಾಗತೊಡಗುತ್ತಾನೆ.

ಅಂದಿನಿಂದಲೇ ಅಲ್ಲವೇ ಮಗುವೊಂದು ಮರವಾಗಿ ವರವಾಗಿ ಪ್ರಕರವಾಗಿ ಪ್ರಜ್ವಲಿಸುತ್ತಾ ತಾನು ತನ್ನವರು ನನ್ನವರು ಗುರು ಹಿರಿಯರು ಬಂದು ಬಾಂದವರು ಎನ್ನುವ ಭಾವನೆ ಹಾಗೆಯೇ ಸಹಕಾರ ಸಹಬಾಳ್ವೆ ಎನ್ನುವ ಗುಣಗಳು ಹುಟ್ಟಿದ್ದು. ಇದೇ ಮುಂದೆ ನಾವೀಗ ಎದೆಯುಬ್ಬಿಸಿ ಮಾತಾಡುತ್ತಿರುವ ಮಾನವೀಯ ಮೌಲ್ಯಗಳ, ಸಂಸ್ಕತಿ, ಪರಂಪರೆ ಎನ್ನುವ ಶಬ್ದಗಳ ನಮ್ಮ ನಿಮ್ಮೆಲ್ಲರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿ ಮಾನವತೆಯ ಅಮೃತಗಂಗೆ ಎದೆಯಿಂದ ಎದೆಗೆ ಪ್ರವಹಿಸಲು ಕಾರಣವಾಗಿರುವುದು.

ಗುರುವೆನ್ನನುವ ಈ ಶಕ್ತಿಯು ನಮ್ಮೆಲ್ಲರ ಗುರಿಯಾಗಿ ನಮ್ಮ ಹಿಂದಿನ ಪ್ರೇರಕನಾಗಿ ನಮ್ಮ ಸಾಧನೆಗೆ ಪೂರಕವಾಗಿ ನಮ್ಮನ್ನು ನಾವು ಅರಿಯುವಂತೆ ಮಾಡಿ ಮುಕ್ತಿಯ ಪತವನ್ನು ತೋರುವಾತನಾಗಿ ಕಂಗೊಳಿಸುತ್ತಾನೆ. ಇಲ್ಲಿ ಈ ಗುರು ಎನ್ನುವ ಈ ಪದ ಪದವಲ್ಲ ಒಬ್ಬ ವ್ಯಕ್ತಿಯಲ್ಲ , ಈ ಜಗದ ಶಕ್ತಿ ಎನ್ನುವ ಪರಿಕಲ್ಪನೆಯನ್ನು ಸಮಾಜದಲ್ಲಿ ಯಾರೂ ತಳ್ಳಿ ಹಾಕುವಂತಿಲ್ಲ. ಹಾಗೆಯೇ ಈ ಗುರುವೆನ್ನುವ ಶಕ್ತಿ ಸ್ಥಾವರತ್ವವನ್ನು ಮೀರಿ ಜಂಗಮಸ್ವರೂಪಿಯಾದದ್ದು ಎಲ್ಲಾ ಕ್ಷೇತ್ರದಲ್ಲಿ ಗುರುವಿನ ಗೌರವ ಮತ್ತು ವ್ಯಕ್ತಿತ್ವ ಅಮೋಘವಾಗಿದ್ದು. ಸಮಾಜಕ್ಕೆ ಗುರುವಿನ ಮರ?ಗ ಕೈಗನ್ನಡಿಯಿದ್ದಂತೆ, ದಿಕ್ಕು ದೆಸೆಯಿಲ್ಲದ ಮಾನವರನ್ನು ಸುಂದರ ಮರ?ತಿಯನ್ನಾಗಿ ಮಾಡಿ ಅವರುಗಳ ಅಂತರಾಳದಲ್ಲಿ ಅಡಗಿರುವಂತಹ ನಿಜ ಮೌಲ್ಯಗಳನ್ನು , ಕೌಶಲ್ಯಗಳನ್ನು ಜಗತ್ತಿನ ಕಲ್ಯಾಣಕ್ಕಾಗಿ ಮೀಸಲಿಡುವಂತೆ ಮಾಡಿ ಅವನ ಜೊತೆ ಜೊತೆಗೆ ಉಳಿದೆಲ್ಲವುಗಳ ರ?ವತೋಮುಖ ಬೆಳವಣಿಗೆ ಶ್ರಮಿಸಿ ಸಮಾಜದ ಸಾಮಾನ್ಯ ವ್ಯಕ್ತಿಗಳನ್ನು ಅಸಮಾನ್ಯ ವ್ಯಕ್ತಿಗಳನ್ನಾಗಿ ಮಾಡಿ ಬೆಳೆಸುವ ಶಕ್ತಿ ಈ ಗುರು/ಶಿಕ್ಷಕನಿಗೆ ಮಾತ್ರ ಇದೆ.

ನಾಡು ನುಡಿ ಸಂಪ್ರದಾಯ ಮತ್ತು ಸಂಸ್ಕೃತಿಯ ಒಂದು ರೀತಿಯ ರಾಯಭರಿಗಳೆಂದರೆ ಈ ಗುರುಪರಂಪರೆಯವರು/ಶಿಕ್ಷಕರು ಆಗಿದ್ದು ನಮ್ಮ ಮುಂದಿನ ಪೀಳಿಗೆಗೆ ಸಂಸ್ಕೃತಿ ಸಂಪ್ರದಾಯಗಳನ್ನು, ಹಲವಾರು ಮಾನವೀಯ ಮೌಲ್ಯಗಳನ್ನು ಭಯ , ಭಕ್ತಿ , ಗೌರವಗಳನ್ನು ಬೆಳೆಸುವಲ್ಲಿ ಗುರುವಿನ ಪಾತ್ರ ಬಹಳ ಮುಖ್ಯ. ಅತ್ಯುತ್ತಮ ಮೌಲ್ಯಗಳನ್ನು ನಾವು ಗುರುವಿನಿಂದಲೇ ಪಡೆಯಲು ಸಾಧ್ಯ . ಹಾಗಾಗಿ, ಮೌಲ್ಯಯುತ ಜೀವನ ಅಳವಡಿಸಿ ಸದೃಢ ಬದುಕನ್ನು ಕಟ್ಟಿಕೊಡುವ ಗುರುಗಳು ಎಲ್ಲರ ಜೀವನಕ್ಕೆ ದಾರಿ ದೀಪ ಎನ್ನುವುದರಲ್ಲಿ ಎರಡು ಮಾತಿಲ್ಲ.

ಹಾಗೆಯೇ ಗುರು, ಶಿಕ್ಷಕ ಮಾರ್ಗದರ್ಶಕ ಯಾರು ಎಂದು ನೋಡುವುದಾದರೆ ಒಂದು ಮಾತು ನೆನಪಾಗುತ್ತದೆ ಅದೇ "ಅಕ್ಷರ ಮಾತ್ರಂ ಕಲಿಸಿದಾತ ಗುರು" ನಮ್ಮ ಜೀವನದಲ್ಲಿ ಅಕ್ಷರ ಮಾತ್ರಂ ಅಂದರೆ ಒಂದು ಅಕ್ಷರ ಒಂದು ಸಣ್ಣ ವಿಚಾರ, ಒಂದು ತಿಳುವಳಿಕೆಯನ್ನು ಒಂದು ಸಲಹೆಯನ್ನು ನೀಡಿದವನೂ ಗುರುವಾಗುತ್ತಾನೆ, ಅಂತಹ ಉದಾತ್ತ ಚಿಂತನೆಯನ್ನು ಗುರು ಎನ್ನುವ ಸ್ಥಾನಕ್ಕೆ ಮೀಸಲಿಡಲಾಗಿದೆ ಹಾಗಾಗಿ ನಮ್ಮ ಕಲಿಕೆ ಪ್ರಾರಂಭವಾಗುವ ಮಗುವಿನ ಹಂತದಿಂದ, ಜೀವನದ ಎಲ್ಲಾ ಅಂದರೆ ಯಲ್ಲಾ ಹಂತದಲ್ಲಿ ಅಕ್ಷರ ಕಲಿಸುವ ಮೇಷ್ಟ್ರಾಗಿ, ತಾರುಣ್ಯದಲ್ಲಿ ಸ್ನೇಹಿತನಾಗಿ, ಸೋತಾಗ ಸಹಕಾರಿಯಾಗಿ, ಕಸ್ಟದಲ್ಲಿ ಕೈಹಿಡಿದು ಕಾರುಣೆ ಮತ್ತು ಕಾರುಣ್ಯವನ್ನು ಸ್ಫುರುಸುವ ಕರುಣಾಮಹಿಯೇ ಈ ಗುರು ಎನ್ನುಬಹುದಾಗಿದೆ.

ನಮ್ಮ ಶಿಕ್ಷಕರು ನಮ್ಮ ಹೆಮ್ಮೆಯೇ ಸರಿ ಹಾಗಂತ ಇಂತಹ ಗುರುವನ್ನು, ಹೆಮ್ಮೆಯ ಶಿಕ್ಷಕರನ್ನು ನಮ್ಮ ನಿತ್ಯ ಜೀವನದಲ್ಲಿ ಅನುಕ್ಷಣವೂ ನೆನಪಿನಲ್ಲಿ ಸ್ಮರಿಸುತ್ತಾ ಅವರು ಹಾಕಿಕೊಟ್ಟ ದಾರಿಯಲ್ಲಿ ನೆಡಯುವುದರ ಮೂಲಕ ಅವರಿಗೆ ನಿಜವಾದ ಗುರುಕಾಣಿಕೆಯನ್ನು ನೀಡಬೇಕಲ್ಲದೆ ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗಿಸಬಾರದು.

ಗುರು ಎನ್ನುವ ಶಕ್ತಿ ವಿಶ್ವರಂಗವ್ಯಾಪಿ, ಸರ್ವಕಾಲಕ್ಕೂ ಸಲ್ಲುವಂತಹದ್ದು, ಸರ್ವೋಚ್ಚ ಸರ್ವಶ್ರೇಷ್ಟ , ಸಂಕಲ್ಪ ಶಕ್ತಿ. ಇಂತಹ ಶಕ್ತಿಯನ್ನು ಅನುದಿನವೂ ಸ್ಮರಿಸುತ್ತಾ ಮರೆತು ಕೂಡ ಮರೆಯದಂತೆ, ಮರೆಯಲಾರನು ಎನ್ನುವ ಸಂಕಲ್ಪ ದೊಂದಿಗೆ ನನ್ನ ವ್ಯಕ್ತಿತ್ವ ನಿರ್ಮಾಣದ ಕಟ್ಟಡಕ್ಕೆ ಆಸೆ ಆಸರೆ, ಸಲಹೆ ಸಹಕಾರದ, ಸರಿ ತಪ್ಪಿನ, ನ್ಯಾಯ ನೀತಿಯ, ಒಲವು ಗೆಲವಿನ, ಚಿತ್ತ ಚಂಚಲತೆಯನ್ನು ಮೀರಿ ಆದರ್ಶಜೀವನದ ಕಲ್ಪನೆಗೆ ಒಂದೊಂದೆ ಇಟ್ಟಿಗೆಯನ್ನಿಟ್ಟ ಎಲ್ಲಾ ಗುರುಪರಂಪರೆಯನ್ನು ಹೆಮ್ಮೆಯಿಂದ ಸ್ಮರಿಸೋಣ. ಈಗ ಹೇಳಿ ಮನುಕುಲಕ್ಕೇ ದಾರಿ ತೋರಿದಾತ, ಮನುಕುಲದ ಏಳ್ಗೆಗೆ ದುಡಿಯುವಾತ, ಮಾನವ ಕಲ್ಯಾಣವನ್ನೇ ಗುರಿಯಾಗಿಸಿಕೊಂಡಾತ ನಮಗೂ ನಮ್ಮ ಮಕ್ಕಳಿಗೂ ಸಿಗಬೇಕಲ್ಲವೆ? ಹರನ ತೋರುವ ಇಂತಹ ಗುರುವಿಗೆ ಸರಿಸಾಟಿ ಯಾರು? ಅಲ್ಲವೆ. "ನಹಿ ಜ್ಞಾನೇನ ಸದೃಶಂ" ಆ ಜ್ಞಾನದ ಅದಿಪತಿಯಾದ ಗುರುವಿಗೆ ನಮೋ ನಮಃ.



ಜಿ. ಶಿವಕುಮಾರ್ ಸೋಗಿ,
ಕಾರವಾರ, ಕೈಗಾ.
9008130204

## ಕವಿ ಮನಸು

### ಬೆವರಿನ ಹನಿಗಳೆ!?



ಬೆವರಿನ ಹನಿಗಳು ಮೂಡಿತೆ ತನುವಲಿ
ಇನಿಯನ ಸರಸದ ದೆಸೆಯಿಂದ
ನಿನ್ನಯ ಸುಂದರ ನಗುವನು ನೋಡುಲು
ಮನದಲಿ ಉಕ್ಕಿದೆ ಆನಂದ

ಗಿಡದಲಿ ಅರಳಿದ ಹೂವಿನ ಸೊಬಗಿದು
ನೋಡಲು ಕಣ್ಣಿಗೆ ಬಲು ಚಂದ
ಹೂವಿನ ಎದೆಯಲಿ ತುಂಬಿದ ಜೇನಿದೆ
ದುಂಬಿಗೆ ಔತಣ ಮಕರಂದ

ಘಮಘಮ ಪರಿಮಳ
ಹೊಮ್ಮುತಲಿರುವುದು
ಎಲ್ಲರ ತನ್ನೆಡೆ ಸೆಳೆಯುತಿದೆ
ಸಂತಸ ಸಂಭ್ರಮಗೊಂಡಿಹ ಮನವಿದು
ಮೌನದೆ ಗಾನವ ಹಾಡುತಿದೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಅಧಿಕಾರದ ನಶೆ




ಅಧಿಕಾರದ
ನಶೆ ಏರಿದ ಮೇಲೆ
ಸಮಸ್ಯೆಗಳೇ,
ಊರುಗೋಲು, ಅದುವೇ
ಅಧಿಕಾರದ ಕೀಲು!!

ಬಣ್ಣದ ಮಾತು
ಸುಳ್ಳಿನ ಸೊಲ್ಲುಗಳ;
ಬಿರುಗಾಳಿಯು!
ಸಮಸ್ಯೆ ಗೌಣವಾಗ್ಸಿ
ಅಧಿಕಾರವಾಗಿಸಿ !

ದಮನೀತರ
ಸಂಕಟಗಳ ಘೀಳಿ
ಪರಿಹಾರವು
ಸುಳ್ಳಿನ ಬಿರುಗಾಳಿ
ಬದುಕು ನಾಶದಲಿ

– ಕಾಡಜ್ಜಿ ಮಂಜುನಾಥ

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ: 10–02–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.02 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 83 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.453 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1612.97 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9270 ಕ್ಯುಸೆಕ್ |
| ಸಾಮರ್ಥ್ಯ | 43.765 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


– ಜಾಹೀರಾತು ವ್ಯವಸ್ಥಾಪಕರು.

WE ARE OPEN for Every Function
Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.
V N Royal Garden Function Hall

Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217

# ಸಾಂಸ್ಕೃತಿಕ ನಗರದಲ್ಲಿ ಹಂಪಿ ಪರಂಪರೆ

## ಮೈಸೂರಿನಲ್ಲಿ ಶಿವಶಂಕರ ಬಣಗಾರ ಅವರ ಹಂಪಿ ಛಾಯಚಿತ್ರಗಳ ಪ್ರದರ್ಶನಕ್ಕೆ ಡಿಸಿ ಚಾಲನೆ | ಕಲಾವಿದರ ಚಿತ್ರಗಳನ್ನು ಕೊಂಡು ಪ್ರೋತ್ಸಾಹಿಸಬೇಕು



■ **ಹಂಪಿ ಟೈಮ್ಸ್ ಮೈಸೂರು**
ಹಂಪಿಯ ಪ್ರಾಕೃತಿಕ ಸೌಂದರ್ಯ, ಸ್ಮಾರಕಗಳ ವಿವಿಧ ಆಯಾಮ ಹಾಗೂ ಹಂಪಿ ಅಂಗಳದಿಂದಲೇ ಸೂರ್ಯೋದಯ, ಸೂರ್ಯಾಸ್ತ ಛಾಯಚಿತ್ರಗಳನ್ನು ತಮ್ಮ ಕ್ಯಾಮರಗಳಲ್ಲಿ ವಿಶಿಷ್ಟವಾಗಿ ಸೆರೆಹಿಡಿದಿರುವ ಛಾಯಗ್ರಾಹಕ ಶಿವಶಂಕರ ಬಣಗಾರ ಅವರ ಛಾಯಚಿತ್ರೆಗಳನ್ನು ಮೈಸೂರಿನಲ್ಲಿ ಶನಿವಾರ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಟ್ವಿಲೈಟ್ ವಿಸ್ಪರ್ಸ ಆಫ್ ಹಂಪಿ ಛಾಯಾಚಿತ್ರ ಪ್ರದರ್ಶನವನ್ನು ನೆರಳು ಬೆಳಕು ಗ್ಯಾಲರಿ, ಕಾಫಿ ಸಿಟಿ ಮೈಸೂರು ಇಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ ವಿ ಉದ್ಘಾಟಿಸಿದರು. ಹಂಪಿಯ ಮತ್ತು ಮೈಸೂರಿನ ಸಾಂಸ್ಕೃತಿಕ ಸಂಬಂಧ ನೆನೆಯುತ್ತಾ ಶಿವಶಂಕರ್ ಬಣಗಾರ್ ಅವರ ಚಿತ್ರಗಳು ಹಂಪಿಯ ಸ್ಮಾರಕಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯವಾಗಿ ತಲುಪಿಸಲು ಹಾಗೂ ಪ್ರವಾಸಿಗರನ್ನು ಸೆಳೆಯಲು ಯಶಸ್ವಿಯಾಗಿವೆ. ಇದರಿಂದ ಸ್ಥಳೀಯ ಆರ್ಥಿಕ ವಹಿವಾಟಿಗೂ ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಛಾಯಾಗ್ರಾಹಕರನ್ನು ಉತ್ತೇಜಿಸುವ ಮೂಲಕ ಅವರಲ್ಲಿನ ಕ್ರಿಯಾಶೀಲತೆಯನ್ನು ಪ್ರೊತ್ಸಾಹಿಸಿ ಅದರ ಲಾಭವನ್ನು ಸಮಾಜಕ್ಕೆ ಸಲ್ಲಿಸುವಲ್ಲಿ ಆಡಳಿತದ ನೆರವು ಅಗತ್ಯ. ದಸರಾವನ್ನು ಕೂಡ ಈ ನಿಟ್ಟಿನಲ್ಲಿ ಮುಂದೆ ಯೋಚಿಸಲಾಗುವುದು ಎಂದರು.

ಶಿವಶಂಕರ್ ಬಣಗಾರ್ ಅವರು ನನ್ನ ನೆಚ್ಚಿನ ಛಾಯಾಗ್ರಾಹಕರು, ನಾನು ಅವರ ಚಿತ್ರಗಳನ್ನು ನಿರಂತರವಾಗಿ ನೋಡಿ ಆನಂದಿಸಿರುವೆ. ಕಲಾವಿದರ ಚಿತ್ರಗಳನ್ನು ಕೊಳ್ಳುವ ಮೂಲಕ ಸಮಾಜ ಪ್ರೊತ್ಸಾಹಿಸಬೇಕು ಎಂದರು. ಪ್ರದರ್ಶನದಲ್ಲಿ ಬಣಗಾರ್ ಅವರ ಒಂದು ಚಿತ್ರ ಕೊಳ್ಳುವ ಮೂಲಕ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಬಣಗಾರ್ ಅವರ ಚಿತ್ರಗಳನ್ನೊಳಗೊಂಡ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಗೌರೀಶ್ ಕಪನಿ, ಜಿಕೆ ಕುಲಕರ್ಣಿ, ರಾಜಶೇಖರ ಜಮದಂಡಿ ಮತ್ತು ರಿಶಬ್ ವೆಂಚುರ್ಸ್ ಸಿಇಓ ಮಧು ಬಳ್ಳಾಕಿ ಅವರು ಉಪಸ್ಥಿತರಿದ್ದರು.



---

**ಮೈಕ್ರೋ ನ್ಯೂಸ್**

### ಜಾನಪದ ಕಾರ್ಯಕ್ರಮಗಳ ಮೂಲಕ ತಂಬಾಕು ನಿಯಂತ್ರಣಕ್ಕೆ ಜಾಗೃತಿ



**ಹಂಪಿ ಟೈಮ್ಸ್ ಕೊಪ್ಪಳ**
ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಜಾನಪದ ಸಂಗೀತ ಹಾಗೂ ಬೀದಿ ನಾಟಕ ಕಾರ್ಯಕ್ರಮ ಮೂಲಕ ಗಂಗಾವತಿ ನಗರ ಹಾಗೂ ತಾಲೂಕಿನ ವಿವಿಧೆಡೆ ವಿಶೇಷ ಜಾಗೃತಿ ಮೂಡಿಸಲಾಯಿತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಹಾಗೂ ಅಕ್ಷರದವ್ವ ಸಾವಿತ್ರಿ ಬಾಯಿ ಪುಲೇ ಕಲಾ ರಂಗ ಸಂಸ್ಥೆ (ರಿ)ಬನ್ನಿಕೊಪ್ಪ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಜಾನಪದ ಸಂಗೀತ ಹಾಗೂ ಬೀದಿ ನಾಟಕ ಕಾರ್ಯಕ್ರಮ ಗಂಗಾವತಿ ನಗರ ಹಾಗೂ ತಾಲೂಕಿನ ವಿವಿಧ ಬಸಪಟ್ಟಣ, ಹೋಸಕೇರ, ಮುಸಲಾಪುರ ಗ್ರಾಮಗಳಲ್ಲಿ ನಡೆಯಿತು.

ಆದ ಕಾರಣ ತಂಬಾಕು ಆರೋಗ್ಯಕ್ಕೆ ತುಂಬಾ ಹಾನಿಕಾರಕವಾಗಿದೆ. ತಂಬಾಕಿನಲ್ಲಿ ನಿಕೋಟಿನ್ ಎಂಬ ಅಂಶವಿರುತ್ತದೆ. ಇದರ ಸೇವನೆಯಿಂದ ಹೆಣ್ಣುಮಕ್ಕಳಲ್ಲಿ ಬಂಜೆತನ, ಗರ್ಭಪಾತ, ಹಾಗೂ ದಂತಕ್ಷಯ ದಂತಹ ರೋಗಗಳು ಕಂಡು ಬಂದರೆ ಗಂಡಸರಲ್ಲಿ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು ಹಾಗೂ ಶ್ವಾಸಕೋಶ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಕಾನೂನು ಪ್ರಕಾರ ಅಪರಾಧ, ಈ ಧೂಮಪಾನ ಸೇವನೆಯಿಂದ ಪ್ರಪಂಚದಲ್ಲಿ ಒಂದು ವರ್ಷಕ್ಕೆ ಅರವತ್ತು ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ. ಈಗಿನ ಯುವ ಪೀಳಿಗೆ ಈ ದುಶ್ಚಟಗಳಿಂದ ದೂರ ಉಳಿದು ಆರೋಗ್ಯವಂತರಾಗಿ ಬದುಕಬೇಕೆನ್ನುವ ಅಂಶವನ್ನು ಬನ್ನಿಕೊಪ್ಪದ ಅಕ್ಷರದವ್ವ ಸಾವಿತ್ರಿ ಬಾಯಿ ಪುಲೇ ಕಲಾ ರಂಗ ಸಂಸ್ಥೆಯ ಕಲಾ ತಂಡದವರು ನಾಟಕದ ಮುಖಾಂತರ ಜನರಿಗೆ ಮನ ಮುಟ್ಟುವ ರೀತಿಯಲ್ಲಿ ಜಾಗೃತಿ ಮೂಡಿಸಿದರು.

ಕಲಾತಂಡದ ಮುಖ್ಯಸ್ಥೆ ಸುಧಾ ಮುತ್ತಾಳ, ಸದಸ್ಯರಾದ ಕೋಟೇಶ್ ದೇವರಮನಿ, ವಿರೂಪಾಕ್ಷಪ್ಪ ಬೆದವಟ್ಟಿ, ದೇವಕ್ಕ ಮುತ್ತಾಳ, ನಾಗರಾಜ ಮನ್ನಾಪುರ, ಶಶಿಕುಮಾರ್ ಮನ್ನಾಪುರ, ರಾಜಾಸಾಬ ಕುಕನೂರ ಈ ಎಲ್ಲಾ ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

---

# ವಿಜ್ಞಾನ ವಸ್ತು ಪ್ರದರ್ಶನದಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ

## ವಿಧ್ಯಾರ್ಥಿನಿಯರಿಗೆ ಸನ್ಮಾನ, ನಗದು ಬಹುಮಾನ ನೀಡಿದ ಶಾಸಕ ಡಾ.ಎನ್.ಟಿ. ಶ್ರೀನಿವಾಸ್




■ **ಹಂಪಿ ಟೈಮ್ಸ್ ಕೂಡ್ಲಿಗಿ**
ತಾಲೂಕಿನ ಗೆದ್ದಲಗಟ್ಟೆ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಶ್ರೀ ನಿವಾಸ ರಾಮಾನುಜನ್ ಗಣಿತ ಪ್ರಯೋಗಾಲಯ, ವಿಜ್ಞಾನ ವಸ್ತು ಪ್ರದರ್ಶನ, ಹೈ ಟೆಕ್ ಶೌಚಾಲಯ ಮತ್ತು ಶಾಲಾ ಕಾಂಪೌಂಡ್ ನ್ನು ಶಾಸಕ ಎನ್.ಟಿ.ಶ್ರೀನಿವಾಸ್ ಉದ್ಘಾಟಿಸಿದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ವಿಜ್ಞಾನ ವಸ್ತು ಪ್ರದರ್ಶನದಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ವಿಧ್ಯಾರ್ಥಿನಿಯರಾದ ಭಾಗ್ಯಮ್ಮ ಮತ್ತು ಪಲ್ಲವಿ ಅವರನ್ನು ಗೌರವಿಸುವುದು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ. ಗ್ರಾಮೀಣ ವಿಧ್ಯಾರ್ಥಿಗಳು ಎನ್ನುವ ಕೀಳರಿಮೆ ಬೇಡ, ರಾಷ್ಟ್ರ ಮಟ್ಟದಲ್ಲಿ ಎಲ್ಲಾ ಕ್ಷೇತ್ರದಲ್ಲೂ ಗ್ರಾಮೀಣ ವಿಧ್ಯಾರ್ಥಿಗಳೇ ಹೆಚ್ಚು ಗಮನ ಸೆಳೆದಿದ್ದಾರೆ. ಆ ನಿಟ್ಟಿನಲ್ಲಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ತಂದು ಉನ್ನತಿ ಕರಿಸುವುದಾಗಿ ತಿಳಿಸಿದರು.

ಗ್ರಾಪಂ ವತಿಯಿಂದ ಅನುದಾನ ಬಳಸಿಕೊಂಡು ಸರ್ಕಾರಿ ಶಾಲೆಗೆ ಹೈ ಟೆಕ್ ಶೌಚಾಲಯ ನಿರ್ಮಿಸಿರುವುದು ಇಡೀ ಜಿಲ್ಲೆಗೆ ಜರ್ಮಲಿ ಗ್ರಾಪಂ ಮಾದರಿ ಆಗಿರುವುದು ಶ್ಲಾಘನೀಯವಾದದ್ದು ಎಂದರು.

ಗ್ರಾಪಂ ಅಧ್ಯಕ್ಷ ಚೆನ್ನಮ್ಮ ರಾಮಪ್ಪ, ಉಪಾಧ್ಯಕ್ಷ ಪಾಪಕ್ಕ ಬಸವರಾಜ, ಸದಸ್ಯರಾದ ರಾಮಸ್ವಾಮಿ, ಪಂಕಜ ತಿಪ್ಪೇಸ್ವಾಮಿ, ಬಸವರಾಜಪ್ಪ, ಮುಖಂಡರಾದ ಹನುಮೇಶ, ಜಿ.ರಮೇಶ, ಜಿ.ಸಿದ್ದನ ಗೌಡ, ನಾಗಲಿಂಗಸ್ವಾಮಿ, ಜರ್ಮಲಿ ವಿಎಸ್ ಎಸ್ ಎನ್ ಅಧ್ಯಕ್ಷ ಹನುಮಂತರಾಯ, ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಬಿ.ಶಿವಾನಂದ, ತಾಲೂಕು ಅಧ್ಯಕ್ಷ ಜಿ.ಕೊಟ್ರೇಶ್, ಕಾರ್ಯದರ್ಶಿ ಟಿ.ಎಚ್.ಎಂ. ಶೇಖರಯ್ಯ, ಉಪಾಧ್ಯಕ್ಷ ಎಚ್.ಜಿ.ಹನುಮಂತಪ್ಪ, ಸಂಘಟನಾ ಕಾರ್ಯದರ್ಶಿ ಎಚ್.ಗೋಣಿಬಸಪ್ಪ, ಮುಖ್ಯ ಶಿಕ್ಷಕ ಜಿ.ಜಗದೀಶ್ ಸೇರಿದಂತೆ ಅನೇಕರು ಇದ್ದರು.

---

# ಸುಡುಗಾಡು ಸಿದ್ಧರ ಸಮಾಜದಿಂದ ಡಿಸಿಗೆ ಸನ್ಮಾನ



■ **ಹಂಪಿ ಟೈಮ್ಸ್ ಹೊಸಪೇಟೆ**
ಅವಕಾಶ ವಂಚಿತ ಮತ್ತು ಎಲೆಮರೆಯ ಕಾಯಿಯಂತಿರುವ ಕಲಾವಿದರನ್ನು ವಿಜಯನಗರ ಜಿಲ್ಲಾಧಿಕಾರಿ ಗುರುತಿಸಿ ಹಂಪಿ ಉತ್ಸವದಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟು ಸುಡುಗಾಡು ಸಿದ್ಧರ ಕಲೆಗೆ ಪ್ರೋತ್ಸಾಹಿಸಿದ್ದಾರೆ ಎಂದು ಕಲಾವಿದ ಶೇಖಪ್ಪ ಕಿನ್ನೂರಿ ಹೇಳಿದರು.

ಇತ್ತೀಚೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೊಸಪೇಟೆ ಹೊರವಲಯದ ಆಶ್ರಯ ಕಾಲೋನಿಯ ಸುಡುಗಾಡು ಸಿದ್ಧರ ಸಮಾಜದಿಂದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರನ್ನು ಸನ್ಮಾನಿಸಿ ಮಾತನಾಡಿದರು. ಜಿಲ್ಲಾಧಿಕಾರಿಗಳು ಹಂಪಿ ಉತ್ಸವವನ್ನು ಅತ್ಯಂತ ಅಚ್ಚುಕಟ್ಟುತನದಿಂದ ಯಶಸ್ವಿಗೊಳಿಸಿದ್ದಾರೆ. ಸ್ಥಳೀಯ ಕಲಾವಿದರಿಗೆ ಅವಕಾಶವಿಲ್ಲ ಎಂಬ ಕೊರಗನ್ನು ದೂರಾಗಿಸಿದ್ದಾರೆ. ಉತ್ಸವಕ್ಕೆ ನಿರೀಕ್ಷೆಗೂ ಮೀರಿದ ಜನರು ಆಗಮಿಸಿದ್ದರು ಎಂದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ನಾಗರಾಜ ಗಂಟಿ, ಎಸ್.ಪಿ.ಮಂಜುನಾಥ, ಮಲ್ಲೇಶಪ್ಪ, ಚೌಡಪ್ಪ ಎಸ್.ಕೆ. ಇತರರು ಇದ್ದರು.

---

# ಬಾಲ್ಯ ವಿವಾಹದಿಂದ ಬಾಲಕಿ ರಕ್ಷಣೆ

**ಹಂಪಿ ಟೈಮ್ಸ್ ಕೊಪ್ಪಳ**
ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಯಲಬುರ್ಗಾ ತಾಲ್ಲೂಕಿನ ಲಿಂಗನಬಂಡಿ ಗ್ರಾಮದ ಅಪ್ರಾಪ್ತೆ ಬಾಲಕಿಯನ್ನು ಬಾಲ್ಯ ವಿವಾಹದಿಂದ ರಕ್ಷಿಸಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿದೆ.

ಫೆ.9ರಂದು ಯಲಬುರ್ಗಾ ತಾಲ್ಲೂಕಿನ ಲಿಂಗನಬಂಡಿ ಗ್ರಾಮದ ಬಾಲಕಿಯೊಬ್ಬಳಿಗೆ ಬಾಲ್ಯ ವಿವಾಹ ಮಾಡುತ್ತಾರೆ ಎಂಬ ಮಾಹಿತಿಯುಮಕ್ಕಳಸಹಾಯವಾಣಿ–1098/112 ಗೆ ಲಭ್ಯವಾದ ಹಿನ್ನಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು, ಶಿಶು ಅಭಿವದ್ಧಿ ಯೋಜನಾ ಮೇಲ್ವಿಚಾರಕಿ, ಮಕ್ಕಳ ಸಹಾಯವಾಣಿ (1098/112)ಯ ಸಿಬ್ಬಂದಿಗಳು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಬಾಲಕಿಯ ಮನೆಗೆ ಭೇಟಿ ನೀಡಿ ವಿಚಾರಿಸಿದಾಗ, ಬಾಲಕಿಯ ವಿವಾಹವನ್ನು ನಿಶ್ಚಯ ಮಾಡಿರುವುದಾಗಿ ತಿಳಿದ ಬಂದಿದೆ. ಈ ಬಾಲಕಿಯ ವಯಸ್ಸಿನ ದೃಢೀಕರಣ ಪರಿಶೀಲಿಸಿದಾಗ 18 ವರ್ಷ ಪೂರ್ಣಗೊಳ್ಳದ ಕಾರಣ ಬಾಲಕಿಯನ್ನು ರಕ್ಷಿಸಿ, ಮುಂದಿನ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರಕಟಣೆ ತಿಳಿಸಿದ್ದಾರೆ.

---

# ತಂದೆ ತಾಯಿಯನ್ನು ಆಶ್ರಮಕ್ಕೆ ಕಳಿಸಬೇಡಿ

■ **ಹಂಪಿ ಟೈಮ್ಸ್ ಹರಪನಹಳ್ಳಿ**
ತಾಲ್ಲೂಕಿನ ಅರಸೀಕೆರೆ ಗ್ರಾಮದ ಎಸ್.ಎಮ್.ಸಿ.ಕೆ.ಪದವಿ ಪೂರ್ವ ಕಾಲೇಜಿನಲ್ಲಿ ಶಾರದಾ ಪೂಜೆ ಹಾಗೂ ದ್ವಿತೀಯ ಪಿಯುಸಿ. ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪ್ರೊಫೆಸರ್.ಎನ್.ಲಿಂಗಣ್ಣ ಮಾಜಿ ಶಾಸಕರು, ಸಂಸ್ಥಾಪಕರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ:– ಈ ಊರಿನಲ್ಲಿ 1989 ರಲ್ಲಿ ಕಾಲೇಜು ಸ್ಥಾಪನೆ ಮಾಡಲಾಯಿತು.

ನಾನು ಓದುವ ಸಮಯದಲ್ಲಿ ಪಟ್ಟ ಕಷ್ಟವನ್ನು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತ ರಾಗಬಾರದೆಂಬ ಉದ್ದೇಶದಿಂದ ಊರಿನ ಎಲ್ಲರ ಸಹಕಾರದಿಂದ ಪ್ರಾರಂಭ ಮಾಡಿದ್ದೇನೆ.

ಈ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿ ದ್ದಾರೆ,ನೀವು ಸಹ ಚನ್ನಾಗಿ ಓದಿ ಉನ್ನತ ಹುದ್ದೆಗೆ ಹೋಗಬೇಕು.

ಯಾವುದೇ ಕಾರಣಕ್ಕೂ ತಂದೆ ತಾಯಿಯರನ್ನು ಆಶ್ರಮಕ್ಕೆ ಕಲಿಸಬೇಡಿ ಎಂದು ಹೇಳಿದರು.

ಮುಖಂಡರಾದ ಪ್ರಶಾಂತ್ ಪಾಟೀಲ್ ಮಾತನಾಡಿ:–ಜಾತೀಯ ವ್ಯವಸ್ಥೆ ದೊಡ್ಡ ಆಲದಮರದಂತೆ ಬೇರು ಬಿಟ್ಟಿದೆ, ಇದನ್ನು ಬೇರು ಸಮೇತ ಕಿತ್ತು ಹಾಕುವ ಶಕ್ತಿ ವಿದ್ಯಾರ್ಥಿಗಳ ಕೈಯಲ್ಲಿದೆ.

ಮುಂದೆ ಏನನ್ನಾದರೂ ಸಾಧಿಸಲು ವಿದ್ಯಾರ್ಥಿಗಳಿಗೆ ಒಳ್ಳೆಯ ಅವಕಾಶವಿದೆ, ವಿದ್ಯಾರ್ಥಿ ಜೀವನವನ್ನು ಹಾಳುಮಾಡಿಕಕೊಳ್ಳಬೇಡಿ, ಇದೇ ಕಾಲೇಜಿಗೆ 50 ಡೆಸ್ಕ್ ಗಳನ್ನು ಕೊಡುವುದಾಗಿ ಭರವಸೆ ನೀಡಿದರು.



ಡಾ.ಎಮ್.ಸುರೇಶ್ ಪ್ರಾಂಶುಪಾಲರು ಮಾತನಾಡಿ:–ಡಾ.ಬಿ.ಆರ್.ಅಂಬೇಡ್ಕರ್ ರವರು ಹಾಕಿಕೊಟ್ಟ ಸಂವಿಧಾನದಂತೆ ಎಲ್ಲರಿಗೂ ಸಮಾನತೆ, ಶಿಕ್ಷಣ ಸಿಗುವಂತಾಗಬೇಕು,ಕೇವಲ ಅಂಕಗಳಿಗೆ ಸೀಮಿತ ವಾಗಬಾರದು, ಪ್ರತಿಯೊಬ್ಬರೂ ನೈತಿಕ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಡಾ.ಭೀಮಪ್ಪ.ಪ್ರಾಧ್ಯಾಪಕರು ಮಾತನಾಡಿ:– ಸಾಧಿಸುವ ಛಲವಿದ್ದರೆ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ, ಬಡತನ ನಿವಾರಣೆ ಆಗಲು ಶಿಕ್ಷಣದಿಂದ ಮಾತ್ರ ಸಾಧ್ಯ.

ಕಠಿಣ ಶ್ರಮ ಪಟ್ಟರೆ ಮುಂದೆ ಉನ್ನತ ಹುದ್ದೆಗೆ ಹೋಗಬಹುದು,ನೀವು ವಿದ್ಯಾರ್ಥಿಗಳು ಇದ್ದಾಗ ಚನ್ನಾಗಿ ಓದಲು ಮಾತ್ರ ಸಾಧ್ಯ, ವಿದ್ಯಾರ್ಥಿಗಳ ಜೀವನ ಬಂಗಾರ ವಿದ್ದಂತೆ. ಹಾಗಾಗಿ ನೀವು ನಿಮ್ಮ ಮುಂದಿನ ಜೀವನವನ್ನು ರೂಪಿಸಿಕೊಳ್ಳಲು ಇದೇ ಒಳ್ಳೆಯ ಸಮಯ,ಆದ್ದರಿಂದ ನೀವು ಎಲ್ಲರೂ ಚನ್ನಾಗಿ ಓದಿರಿ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಆರ್. ಕುಮಾರ್ ನಾಯ್ಕ್ ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಭೂ ದಾನಿಗಳಾದ ಉಮಾದೇವಿ ಜಾತಯ್ಯ, ಸೋಮಶೇಖರ್ ಕಿಚಡಿ. ಆಡಳಿತಾಧಿಕಾರಿಗಳು, ಪೂಜಾರ್ ಮರಿಯಪ್ಪ, ಎ.ಹೆಚ್.ಎ. ಹೆಚ್.ಕಾಲೇಜಿನ ಪ್ರಾಚಾರ್ಯರಾದ ಎ.ಹೆಚ್. ಉಮೇಶ್,ಪ್ರೌಢಶಾಲೆಯ ಮುಖ್ಯ ಗುರುಗಳಾದ ಅರಸೀಕೆರೆ ಸಿದ್ದರಾಮನಗೌಡ,ತೌಡೂರು ಬಿ. ರುದ್ರೇಶ್, ಅಣಜಿಗೆರೆ ಕೆ. ಶಿವಯೋಗಿ, ಪಿ. ದುರುಗೇಶ್, ಈಶಪ್ಪ, ಉಪನ್ಯಾಸಕರು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

---

# ಜಾತ್ರೆ ನುಡಿಸಿರಿಗೆ ಹಾಲಯ್ಯ ಶಾಸ್ತ್ರಿಗಳಿಗೆ ಆಹ್ವಾನ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಇದೇ ತಿಂಗಳು ಫೆ.20ರಂದು ನಂದಿಪುರದಲ್ಲಿ ನಡೆಯುವ ಸಾಹಿತ್ಯ ಜಾತ್ರೆಯ ನಂದಿಪುರ ನುಡಿಸಿರಿಯ ಸರ್ವಾಧ್ಯಕ್ಷರಾಗಿ ಸೋಗಿಯ ಹಾಲಯ್ಯ ಶಾಸ್ತ್ರಿಗಳನ್ನು ಆಹ್ವಾನಿಸಲಾಯಿತು ಎಂದು ನಂದಿಪುರ ಮಠದ ಡಾ.ಮಹೇಶ್ವರ ಸ್ವಾಮೀಜಿ ತಿಳಿಸಿದರು. ಈ ಸಂದರ್ಭದಲ್ಲಿ ರುದ್ರಮುನಿ ಸ್ವಾಮಿ, ಆರ್.ಎಂ.ಉತ್ತಂಗಿ, ಎಸ್.ಎಂ.ಪರಮೇಶ್ವರಯ್ಯ, ಎಸ್.ಎಂ.ಸದ್ಯೋಜಾತಯ್ಯ, ಡಾ.ಎಲೆಗಚ್ಚಿನ ಜಂಬಣ್ಣ, ವೈ.ವಾಮನಗೌಡ್ರು, ನಾಗೇಂದ್ರಯ್ಯ, ದೇವಪುತ್ರಪ್ಪ, ಟೀ.ಪುಡಿ ಬಸವರಾಜ್, ಎಸ್.ಸಿ.ಮಲ್ಲಿನಾಥ್, ಯು.ಮಂಜುನಾಥ, ಎನ್.ಗುರು ಬಸವರಾಜ್, ಎಚ್.ನಾಗರಾಜ್, ಎಂಪಿ.ಎಂ.ಮಂಜುನಾಥ್, ಸಾಹಿತಿ ಗುಂಡೂರ್ ಪಾಟೀಲ್ ಹಾಗೂ ಸೋಗಿ ಗ್ರಾಮದ ಎಂ.ಬಿ.ಬಸವರಾಜ್ ಮತ್ತಿತರರು ಇದ್ದರು.

ಹಂಪಿ ಟೈಮ್ಸ್: ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿ
ಮೊ: 9448633038

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA